# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಆಗಸ್ಟ್ 26, 2022

ಸಂಪುಟ : 49 ಸಂಚಿಕೆ : 104 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







# ಅಭಿವೃದ್ಧಿಯೇ ಸರ್ಕಾರದ ಗುರಿ

## ರಾಣೇಬೆನ್ನೂರಲ್ಲಿ ಸಾವಿರಾರು ಕೋಟಿ ರೂ. ಅಭಿವೃದ್ಧಿ: ಸಿಎಂ



ರಾಣೇಬೆನ್ನೂರು, ಆ. 25- ಬಿಜೆಪಿ ಸರ್ಕಾರ ಅಭಿವೃದ್ಧಿಯನ್ನೇ ಗುರಿಯಾಗಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ರಾಣೇಬೆನ್ನೂರು ಕ್ಷೇತ್ರದಲ್ಲಿ ಸಾವಿರಾರು ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಪಟೇಲ್ ಮೈದಾನದ ಆವರಣದಲ್ಲಿ ಶಾಸಕ ಅರುಣಕುಮಾರ್ ಪೂಜಾರ್ ಅವರ ಹುಟ್ಟುಹಬ್ಬದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ನೇಕಾರರ ಸಂಖ್ಯೆ ಹೆಚ್ಚಾಗಿದ್ದು, ಸುಮಾರು ಎರಡು ಸಾವಿರ ಜನರಿಗೆ ಉದ್ಯೋಗ ದೊರಕಿಸಲು ಹಾಗೂ ಹ್ಯಾಂಡ್ ಲೂಮ್, ಪವರ್ ಲೂಮ್‌ಗಳ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಜವಳಿ ಪಾರ್ಕ್ ಮಾಡಲು ಉದ್ದೇಶಿಸಲಾಗಿದೆ. ರೇಷ್ಮೆ ಬೆಳೆಗಾರರು ಹೆಚ್ಚು ಇರುವದರಿಂದ ಈಗಾಗಲೇ 30 ಕೋಟಿ ರೂ. ವೆಚ್ಚದಲ್ಲಿ ರೇಷ್ಮೆ ಮಾರುಕಟ್ಟೆ ಸ್ಥಾಪಿಸಲಾಗಿದೆ ಎಂದು ಹೇಳಿದರು.

ರೈತರ ಮಕ್ಕಳಿಗೆ ಹಾಗೂ ರೈತ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ ಯೋಜನೆ, ಗುಡಿ ಕೈಗಾರಿಕೆಗಳನ್ನು ಬೆಳೆಸಲು ಕಸುಬುದಾರರಿಗೆ ಹಾಗೂ ಎಲ್ಲಾ ಸ್ತ್ರೀ ಸಂಘಗಳಿಗೆ 1.50 ಲಕ್ಷ ರೂ.ಸಾಲ ನೀಡಿ ಅವರು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸಲಾಗುವುದು. ನಗರ ಮತ್ತು ಗ್ರಾಮೀಣ ಭಾಗದಲ್ಲಿನ ದುಡಿಯುವ ಜನರಿಗೆ ಶಕ್ತಿ ತುಂಬಲಾಗುವುದು ಎಂದರು.

ಪ್ರತಿಯೊಬ್ಬ ಕುರಿಗಾರರಿಗೆ 20 ಕುರಿ, 1 ಟಗರು ಕೊಡುವುದಾಗಿ, ವಿವೇಕಾನಂದ ಯುವಕ ಮಂಡಳಿಗಳನ್ನು ರಚಿಸಿ 10 ಲಕ್ಷ ರೂ. ಹಣ ನೀಡಲು ಇಂದು ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ರುವುದಾಗಿ ಮುಖ್ಯ ಮಂತ್ರಿಗಳು ಹೇಳಿದರು.

ತಾಲ್ಲೂಕಿನಲ್ಲಿ ನೀರಾವರಿ, ನಗರಕ್ಕೆ ನಗರೋತ್ಥಾನ ಅಲ್ಲದೇ ವಿಶೇಷ ಅನುದಾನವನ್ನೂ ನೀಡಿದ್ದೇನೆ. ಉತ್ತರ ಕರ್ನಾಟಕದ ಹೆಬ್ಬಾಗಿಲಾದ ಇಲ್ಲಿ ಸ್ವಾಗತ ಕಮಾನು ನಿರ್ಮಿಸುವುದೂ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಾಗಿವೆ ಎಂದರು. ರಾಜ್ಯ ದೇಶದಲ್ಲಿಯೇ ಮಾದರಿಯಾಗುವ ನಿಟ್ಟಿನಲ್ಲಿ ಕಟ್ಟಲು ಮತ್ತೆ ನಮಗೆ ಅಧಿಕಾರ ಕೊಡಿ ಎಂದು ಮನವಿ ಮಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಅಲ್ಪ ಅವಧಿಯಲ್ಲಿಯೇ ಅಪಾರ ಅಭಿವೃದ್ಧಿ ಮಾಡಿ, ಜನರ ಪ್ರೀತಿ ಗಳಿಸಿದ ಅರುಣ ಕುಮಾರ (2ನೇ ಪುಟಕ್ಕೆ)

### ಹೊಗಳಿಕೆ ಹೊನ್ನ ಶೂಲ..

**ಹೊಗಳಿಕೆಗೆ ನಾನು ಹೆದರುತ್ತೇನೆ. ತೆಗಳಿಕೆಗೆ ಕೆಲಸ ಮಾಡಿ ಯಶಸ್ಸಿನ ಶಿಖರದೊಂದಿಗೆ ಟೀಕೆಗಳನ್ನು ಮೆಟ್ಟಿ ದಿಟ್ಟ ಉತ್ತರ ಕೊಡುತ್ತೇನೆ. ನಮ್ಮದು ಸ್ಥಿತಪ್ರಜ್ಞೆಯ ಸರ್ಕಾರ ಎಂದು ನಿರೂಪಕರ ಹೊಗಳಿಕೆ ಉಲ್ಲೇಖಿಸಿ ಬೊಮ್ಮಾಯಿ ಹೇಳಿದರು. 83 ರಿಂದ ನಾನು ಇಲ್ಲಿ ರಾಜಕೀಯ ಮಾಡಿದ್ದೇನೆ. ಪರಿಷತ್ ಚುನಾವಣೆಯಲ್ಲಿ ನನಗೆ ಹೆಚ್ಚು ಮತ ನೀಡಿದ್ದು ರಾಣೇಬೆನ್ನೂರು ತಾಲ್ಲೂಕು. ಶಾಸಕ ಅರುಣಕುಮಾರ ರಾಣೇಬೆನ್ನೂರ ಕಾ ರಾಜಾ, ರೇಣುಕಾಚಾರ್ಯ ಅವರು ಹೊನ್ನಾಳಿಯ ಹುಲಿ ಎಂದು ಜನರ ಕೇಕೆಯ ಮಧ್ಯೆ ಹೇಳಿದರು.**

# ಹಾವೇರಿ ಸೇರಿ ಎಂಟು ಕಡೆ ವಿ.ವಿ.ಸ್ಥಾಪನೆ

## ಜಿಲ್ಲೆಗೊಂದು ವಿ.ವಿ. ಸ್ಥಾಪನೆ ದಿಸೆಯಲ್ಲಿ ಸರ್ಕಾರದ ಕ್ರಮ: ಸಚಿವ ಸಂಪುಟ ಅನುಮತಿ

ಬೆಂಗಳೂರು, ಆ. 25 - ರಾಜ್ಯದಲ್ಲಿ ಎಂಟು ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ರಾಜ್ಯ ಸಚಿವ ಸಂಪುಟ ಅನುಮತಿ ನೀಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ್ ಚಾಮರಾಜನಗರ, ಕೊಡಗು, ಮಂಡ್ಯ, ಹಾವೇರಿ, ಕೊಪ್ಪಳ, ಬಾಗಲಕೋಟೆ ಮತ್ತು ಬೀದರ್‌ಗಳಲ್ಲಿ ವಿ.ವಿ.ಗಳು ಸ್ಥಾಪನೆಯಾಗಲಿವೆ ಎಂದರು.

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಕರ್ನಾಟಕ ವಿವಿಗಳ ಕಾಯ್ದೆ 2000ಕ್ಕೆ ತಿದ್ದುಪಡಿಗೆ ಸಂಪುಟ ಸಮ್ಮತಿಸಿದೆ. ಈಗಾಗಲೇ ಈ ಜಿಲ್ಲೆಗಳಲ್ಲಿ ಸ್ನಾತಕೋತ್ತರ ಕೇಂದ್ರಗಳು ಆರಂಭವಾಗಿದ್ದು, ಅಲ್ಲಿಯೇ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಲಿವೆ.

ಯುಜಿಸಿ ನಿಯಮಾವಳಿಗಳ ಅಡಿಯಲ್ಲೇ ವಿ.ವಿ.ಗಳು ಬರುತ್ತಿದ್ದು, ಪ್ರತಿ ವಿ.ವಿ. ಸ್ಥಾಪನೆಗೆ ಮೂಲಸೌಕರ್ಯ ಕಲ್ಪಿಸಲು ಯುಜಿಸಿ 20 ರಿಂದ 30 ಕೋಟಿ ರೂ. ಅನುದಾನ ನೀಡಲಿದೆ ಎಂದರು.

ಹೊಸ ವಿ.ವಿ.ಗಳ ಪೈಕಿ ಕ್ರಮವಾಗಿ ಚಾಮರಾಜನಗರ ವಿ.ವಿ.ಯಲ್ಲಿ 18, ಹಾಸನ ವಿ.ವಿ.ಯಲ್ಲಿ 36, ಹಾವೇರಿ 40, ಬೀದರ್ 140, ಕೊಡಗು 24, ಕೊಪ್ಪಳ 40 ಮತ್ತು ಬಾಗಲಕೋಟೆ ವಿವಿಗಳು 71 ಕಾಲೇಜುಗಳನ್ನು ಹೊಂದಿರಲಿವೆ. ಇವುಗಳ ಜತೆಗೆ ಮಂಡ್ಯ ವಿ.ವಿ. ವ್ಯಾಪ್ತಿಗೆ ಆ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳು ಬರಲಿವೆ ಎಂದು ಅವರು ವಿವರಿಸಿದರು.

ಮಂಡ್ಯ ವಿ.ವಿ. ಒಂದನ್ನು ಹೊರತುಪಡಿಸಿ ಮಿಕ್ಕ 7 ವಿ.ವಿ.ಗಳ ಆರಂಭವನ್ನು ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇದಕ್ಕಾಗಿ ಈಗಾಗಲೇ ತಲಾ 2 ಕೋಟಿ ರೂ.ಗಳಂತೆ ಒಟ್ಟು 14 ಕೋಟಿ ರೂಪಾಯಿ ಒದಗಿಸಲಾಗಿದೆ. ಏಕೀಕೃತ ವಿ.ವಿ.ಯಾಗಿದ್ದ ಮಂಡ್ಯದ ಸರ್ಕಾರಿ ಕಾಲೇಜನ್ನು ಪೂರ್ಣ ಪ್ರಮಾಣದ ವಿ.ವಿ. ಯಾಗಿ ಮಾಡುವ ತೀರ್ಮಾನವನ್ನು ಇತ್ತೀಚೆಗೆ ಕೈಗೊಳ್ಳಲಾಗಿತ್ತು ಎಂದು ಅವರು ವಿವರಿಸಿದರು.

ಜಿಲ್ಲೆಗೊಂದು ವಿ.ವಿ. ಇರಬೇಕು ಎನ್ನುವುದು ಸರ್ಕಾರದ ತೀರ್ಮಾನವಾಗಿದೆ. ಈ ಮೂಲಕ ಶೈಕ್ಷಣಿಕ ಅಸಮತೋಲನ ನಿವಾರಣೆ ಮಾಡಲಾಗುವುದು. ಜೊತೆಗೆ, ಯುವಜನರಿಗೆ ಮನೆ ಬಾಗಿಲಲ್ಲೇ ಗುಣ ಮಟ್ಟದ ಶಿಕ್ಷಣ ನೀಡುವ ಸದಾಶಯ ಇದರ ಹಿಂದಿದೆ ಎಂದು ಸಚಿವರು ಹೇಳಿದರು.

ನೂತನ ವಿ.ವಿ.ಗಳ (3ನೇ ಪುಟಕ್ಕೆ)

### ಗುತ್ತಿಗೆದಾರರು ಸಾಕ್ಷಿ ನೀಡಿದರೆ ತನಿಖೆಗೆ ಅನುಮತಿ

**ಕಾನೂನು ಮತ್ತು ಸಂಸದೀಯ ಸಚಿವ ಮಾಧುಸ್ವಾಮಿ**

ಬೆಂಗಳೂರು, ಆ. 25 – ಸಚಿವ, ಶಾಸಕರ ವಿರುದ್ಧ ಗುತ್ತಿಗೆದಾರರಿಂದ ಲಂಚ ಪಡೆದಿರುವು ದಕ್ಕೆ ಪುರಾವೆ ದಾಖಲೆ ಒದಗಿಸಿದರೆ, ಅವರ ವಿರುದ್ಧ ತನಿಖೆಗೆ ಸರ್ಕಾರ ಅನುಮತಿ ನೀಡ ಲಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದ್ದಾರೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿರುವ ಆರೋಪಕ್ಕೆ (3ನೇ ಪುಟಕ್ಕೆ)

### ಸೆ.12ರಿಂದ ಮಳೆಗಾಲದ ಅಧಿವೇಶನಕ್ಕೆ ಸಮ್ಮತಿ

**ಕೆಪಿಎಸ್‌ಸಿಯಲ್ಲಿ ಡಿ ಗ್ರೂಪ್ ನೌಕರರ ನೇಮಕಾತಿಯಲ್ಲಿ ಮೌಖಿಕ ಸಂದರ್ಶನ ರದ್ದು**

**ರಾಜ್ಯದಲ್ಲಿ ಹೊಸತಾಗಿ 4,244 ಅಂಗನವಾಡಿ ಕೇಂದ್ರ ಸ್ಥಾಪನೆ**

**ಹುತಾತ್ಮಕ ಸೈನಿಕರ ಕುಟುಂಬಕ್ಕೆ ಸರ್ಕಾರಿ ನೌಕರಿ**

ಬೆಂಗಳೂರು, ಆ. 25- ರಾಜ್ಯ ವಿಧಾನ ಮಂಡಲದ ಮಳೆಗಾಲದ ಅಧಿವೇಶನ ಸೆಪ್ಟೆಂಬರ್ 12 ರಿಂದ ನಡೆಸಲು ರಾಜ್ಯ ಸಚಿವ ಸಂಪುಟ ಸಮ್ಮತಿಸಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಜೆ.ಸಿ.ಮಾಧುಸ್ವಾಮಿ, ಅಧಿವೇಶನ 15 ದಿನಗಳ ಕಾಲ ನಡೆಯಲಿದ್ದು, ಇದರಲ್ಲಿ ಹತ್ತು ದಿನ ಸರ್ಕಾರಿ ಕಾರ್ಯಕಲಾಪಗಳು ನಡೆಯಲಿವೆ. ಉಳಿದ ಐದು ದಿನ ಸರ್ಕಾರಿ ರಜೆ ಇರಲಿದೆ ಎಂದರು. (3ನೇ ಪುಟಕ್ಕೆ)

# 12 ರೈಲುಗಳ ವೇಳಾಪಟ್ಟಿ ಬದಲಾವಣೆ

### 28ರಂದು ಅಶೋಕ ರಸ್ತೆ ಅಂಡರ್‌ಪಾಸ್ ಕಾಮಗಾರಿ

ದಾವಣಗೆರೆ, ಆ. 25 - ನಗರದ ಅಶೋಕ ರಸ್ತೆ ರೈಲ್ವೆ ಕ್ರಾಸಿಂಗ್‌ಗೆ ಅಂಡರ್‌ಪಾಸ್ ನಿರ್ಮಿಸಲಾಗುತ್ತಿದ್ದು, ಆ.28ರ ಭಾನುವಾರದಂದು ಅಂಡರ್‌ಪಾಸ್‌ಗೆ ಕಾಂಕ್ರೀಟ್ ಚೌಕಗಳನ್ನು ಅಳವಡಿಸಲಾಗುವುದು. ಕಾಮಗಾರಿ ಹಿನ್ನೆಲೆಯಲ್ಲಿ ಹನ್ನೆರಡು ರೈಲುಗಳ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ.

ಎರಡು ರೈಲುಗಳನ್ನು ಪೂರ್ಣ ರದ್ದುಗೊಳಿಸಿದ್ದರೆ, ನಾಲ್ಕು ರೈಲುಗಳನ್ನು ಭಾಗಶಃ ರದ್ದುಗೊಳಿಸಲಾಗಿದೆ. ಮೂರು ರೈಲುಗಳ ವೇಳಾಪಟ್ಟಿ ಬದಲಿಸಿದ್ದರೆ, ಮೂರು ರೈಲುಗಳ ಮಾರ್ಗ ಬದಲಿಸಲಾಗಿದೆ.

ಆ.28ರ ಬೆಳಿಗ್ಗೆ 6 ಗಂಟೆಯಿಂದ ಕಾಮಗಾರಿ ಆರಂಭವಾಗಿ ಹತ್ತು ತಾಸಿನವರೆಗೆ ನಡೆಯಲಿದೆ ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

**ಆ.28ರ ಭಾನುವಾರದ ವೇಳಾಪಟ್ಟಿ ಬದಲಾವಣೆ**

**ರದ್ದತಿ :** ಹುಬ್ಬಳ್ಳಿ - ಚಿತ್ರದುರ್ಗ ಡೈಲಿ ಎಕ್ಸ್‌ಪ್ರೆಸ್ ಸಂಖ್ಯೆ 17347 ಮತ್ತು ಚಿತ್ರದುರ್ಗ - ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 17348 ರದ್ದುಗೊಳಿಸಲಾಗಿದೆ.

**ಭಾಗಶಃ ರದ್ದತಿ :** ಧಾರವಾಡ - ಕೆಎಸ್‌ಆರ್ ಡೈಲಿ ಸೂಪರ್‌ಫಾಸ್ಟ್ ಇಂಟರ್‌ಸಿಟಿ ಸಂಖ್ಯೆ 12726 ಭಾಗಶಃ ರದ್ದುಗೊಳಿಸಲಾಗಿದೆ. ರೈಲು ಧಾರವಾಡದ ಬದಲು ಚಿಕ್ಕಜಾಜೂರಿನಿಂದ ಹೊರಡಲಿದೆ.

ಬೆಂಗಳೂರು - ಹುಬ್ಬಳ್ಳಿ ಜನಶತಾಬ್ದಿ ಡೈಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 12079 ಸಂಚಾರ ಭಾಗಶಃ ರದ್ದಾಗಿದ್ದು, ಬೆಂಗಳೂರಿನಿಂದ ಬಂದು ಚಿಕ್ಕಜಾಜೂರಿನಲ್ಲೇ (2ನೇ ಪುಟಕ್ಕೆ)

### ಕಂದಾಯ ಭೂಮಿಯ ಕೃಷಿ ಚಟುವಟಿಕೆ 'ಕಬಳಿಕೆ' ಅಲ್ಲ

**ನಗರ – ಪಾಲಿಕೆ ಹೊರತು ಪಡಿಸಿ ಉಳಿದೆಡೆ ಅನ್ವಯ**

ಬೆಂಗಳೂರು, ಆ.25- ನಗರ ಮತ್ತು ಪಾಲಿಕೆ ವ್ಯಾಪ್ತಿ ಹೊರತುಪಡಿಸಿ, ಯಾವುದೇ ರೈತರು ಕಂದಾಯ ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದರೆ, ಅಂತಹವರನ್ನು ಭೂ ಕಬಳಿಕೆ ವ್ಯಾಪ್ತಿಗೆ ತರದಿರಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಚಿವ ಮಾಧುಸ್ವಾಮಿ ತಿಳಿಸಿದ್ದಾರೆ.

ಸರ್ಕಾರಿ ಭೂಮಿ ಎಂದು ತಿಳಿಯದೆ, ರೈತರು ಕೃಷಿ ಚಟುವಟಿಕೆ ಮಾಡಿಕೊಂಡಿರುತ್ತಾರೆ. ಅಂತಹವರನ್ನು ಭೂಗಳ್ಳರು ಎನ್ನಲಾಗದು. ಈ ದೃಷ್ಟಿಯಿಂದ ಕಂದಾಯ ಇಲಾಖೆ ಕಾನೂನಿಗೆ ತಿದ್ದುಪಡಿ ತಂದು ಗ್ರಾಮೀಣ ಭಾಗಗಳನ್ನು ಭೂಕಬಳಿಕೆ ಎನ್ನುವ (3ನೇ ಪುಟಕ್ಕೆ)

### ಉಕ್ರೇನ್ ಸಮರ : ಮೊದಲ ಬಾರಿ ರಷ್ಯಾ ವಿರುದ್ಧ ಭಾರತದ ಮತ

ವಾಷಿಂಗ್ಟನ್, ಆ. 25 – ಉಕ್ರೇನ್ ಸಮರದ ಕುರಿತು ನಡೆಸಲಾದ ವಿಶ್ವಸಂಸ್ಥೆಯ ಭದ್ರ ತಾ ಮಂಡಳಿಯ ಸಭೆಯಲ್ಲಿ ಭಾರತ ಮೊದಲ ಬಾರಿಗೆ ರಷ್ಯಾ ವಿರುದ್ಧ ಮತ ಚಲಾಯಿಸಿದೆ.

ಕಳೆದ ಫೆಬ್ರವರಿಯಲ್ಲಿ ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿತ್ತು. ಇದುವರೆಗೂ ರಷ್ಯಾ ವಿರುದ್ಧ ಭಾರತ ಮತ ಚಲಾಯಿಸಿರಲಿಲ್ಲ. ಅಮೆರಿಕ ಸೇರಿದಂತೆ ಹಲವು ಪಾಶ್ಚಾತ್ಯ ದೇಶಗಳು ಈಗಾಗಲೇ ರಷ್ಯಾ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಿವೆ.

ರಷ್ಯಾ ನಡೆಸಿದ ದಾಳಿಯನ್ನು ಇದುವರೆಗೂ ಭಾರತ ಖಂಡಿಸಿಲ್ಲ. ರಷ್ಯಾ ಹಾಗೂ ಉಕ್ರೇನ್‌ಗಳು ಮಾತುಕತೆ (3ನೇ ಪುಟಕ್ಕೆ)

### ಕೇಂದ್ರದಿಂದ ಗೋಧಿ, ಹಿಟ್ಟು ರಫ್ತು ನಿರ್ಬಂಧ

ನವದೆಹಲಿ, ಆ. 25 – ಗೋಧಿ ಹಾಗೂ ಗೋಧಿ ಹಿಟ್ಟಿನ ರಫ್ತಿನ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. ಬೆಲೆ ಏರಿಕೆ ತಡೆಯುವ ಸಲುವಾಗಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ವಿದೇಶ ವ್ಯಾಪಾರ (3ನೇ ಪುಟಕ್ಕೆ)

# ಹೈಬೀಮ್ ಸಮಸ್ಯೆ ತಡೆಗೆ ಅಭಿಯಾನ

## ಡಿಸಿ ಅಧ್ಯಕ್ಷತೆಯ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ತೀರ್ಮಾನ

ದಾವಣಗೆರೆ, ಆ. 25 – ಬಸ್ ಸೇರಿದಂತೆ ಹಲವು ವಾಹನಗಳಲ್ಲಿ ಅತಿಯಾದ ಹೆಡ್‌ಲೈಟ್ ಹಾಕಿಕೊಂಡು ಹೈಬೀಮ್ ಸಮಸ್ಯೆಯಾಗುತ್ತಿದೆ. ಇದನ್ನು ತಡೆಯಲು ಹೆದ್ದಾರಿಯ ಟೋಲ್‌ಗಳಲ್ಲಿ ಪ್ರತಿ ವಾರ ಅಭಿಯಾನ ನಡೆಸಲು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ಸಮಿತಿಯ ಸಭೆ ನಡೆಸಲಾಗಿತ್ತು.

ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಮಾತನಾಡಿ, ಬಸ್ ಸೇರಿದಂತೆ ಹಲವು ವಾಹನಗಳು ಆರು ಹೆಡ್‌ಲೈಟ್‌ಗಳನ್ನು ಹಾಕಿಕೊಂಡು ಚಲಿ ಸುತ್ತಿವೆ. ಇದರಿಂದಾಗಿ ದ್ವಿಚಕ್ರ ವಾಹನ ಗಳೂ ಸೇರಿದಂತೆ ಹಲವಾರು ವಾಹನಗಳು ಅಪಘಾತಕ್ಕೆ ಸಿಲುಕುವ ಅಪಾಯವಿದೆ ಎಂದರು.

ಈ ಬಗ್ಗೆ ಆರ್.ಟಿ.ಒ. ಹಾಗೂ ಪೊಲೀಸರು ಜಂಟಿ ಅಭಿಯಾನ ನಡೆಸಲಿ ದ್ದಾರೆ. ವಾರದಲ್ಲಿ ಒಮ್ಮೆ ಟೋಲ್ ಗೇಟ್ ಬಳಿ ಅಭಿಯಾನ ನಡೆಸಿ ಹೈಬೀಮ್ ಹಾವಳಿ ತಪ್ಪಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಹೇಳಿದರು.



ಜಿಲ್ಲಾಧಿಕಾರಿ ಕಾಪಶಿ ಮಾತನಾಡಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಸೇರಿದಂತೆ ಎಲ್ಲೆಲ್ಲಿ ಅಪಘಾತಗಳು ಸಂಭವಿಸುತ್ತಿವೆ ಎಂಬ ಅಂಕಿ-ಅಂಶಗಳನ್ನು ಸಂಗ್ರಹಿಸಿ. ಪದೇ ಪದೇ ಅಪಘಾತವಾಗಿದ್ದಲ್ಲಿ ಆ ಸ್ಥಳವನ್ನು ಜಂಟಿ ತನಿಖೆ ನಡೆಸಿ ಅಪಘಾತ ವಲಯದಿಂದ ಮುಕ್ತವಾಗಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

**ರಿಫ್ಲೆಕ್ಟರ್ ಅಳವಡಿಕೆ :** ಟ್ರ್ಯಾಕ್ಟರ್‌ಗಳಲ್ಲಿ ರಿಫ್ಲೆಕ್ಟರ್ ಸ್ಟಿಕರ್ ಅಳವಡಿಸಿಕೊಳ್ಳಬೇಕು. ರಿಫ್ಲೆಕ್ಟರ್ ಇಲ್ಲದಿದ್ದರೆ, ಹಿಂದಿನಿಂದ ಬರುವವರಿಗೆ ಟ್ರ್ಯಾಕ್ಟರ್‌ಗಳು ಕಾಣುವುದಿಲ್ಲ ಎಂದು ಜಿಲ್ಲಾಧಿಕಾರಿ ಕಾಪಶಿ ಹೇಳಿದರು.

**ಕಾಮಗಾರಿ ಸೂಚನೆ :** ರಸ್ತೆಗಳಲ್ಲಿ ಕಾಮಗಾರಿ ನಡೆಸುವಾಗ ಗುಂಡಿಗಳನ್ನು ತೆಗೆದ ಸಂದರ್ಭದಲ್ಲಿ, ಸುತ್ತಲೂ ಸೂಚನಾ ಫಲಕ ಹಾಗೂ ಬ್ಯಾರಿಕೇಡ್ ಅಳವಡಿಸಬೇಕು ಎಂದು ಜಿಲ್ಲಾಧಿಕಾರಿ ಇದೇ ಸಂದರ್ಭದಲ್ಲಿ ಹೇಳಿದರು.

ಹೆದ್ದಾರಿಗಳು ಹಾಗೂ ಇತರೆ ರಸ್ತೆಗಳಲ್ಲಿ ಒಂದೇ ಕಡೆ ನೀರು ನಿಲ್ಲುವುದು ಅಪಘಾತಕ್ಕೆ ಆಹ್ವಾನ ನೀಡುತ್ತದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸೈಫುಲ್ಲಾ ಒತ್ತಾಯಿಸಿದರು.

**ಎನ್.ಆರ್. ರಸ್ತೆ ಅವ್ಯವಸ್ಥೆ :** ನಗರದ ಜನನಿಬಿಡವಾದ ಎನ್.ಆರ್. ರಸ್ತೆಯನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಆರು ತಿಂಗಳ ಹಿಂದಷ್ಟೇ ನಿರ್ಮಿಸಲಾಗಿತ್ತು. ಒಳಚರಂಡಿ ಬ್ಲಾಕ್ ಆಗಿದೆ ಎಂದು ಚೇಂಬರ್ ಒಡೆದು ತೆಗೆಯಲಾಗಿದೆ. ಚೇಂಬರ್ ಒಡೆದು ಕಾಮಗಾರಿ ನಡೆಸುತ್ತಿರುವ ಬಗ್ಗೆ ಸೂಚನಾ ಫಲಕ ಹಾಗೂ ತಡೆಗಳನ್ನೂ ಹಾಕಿಲ್ಲ ಎಂದು ಸಭೆಯ ಗಮನಕ್ಕೆ ತರಲಾಯಿತು.

ಸಭೆಯಲ್ಲಿ ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿ ವಿಜಯ್ (3ನೇ ಪುಟಕ್ಕೆ)

# ಗುಣಮಟ್ಟದಲ್ಲಿ ರಾಜೀ ಇಲ್ಲ: ಸಂಸದ

## ನಿರಾಶ್ರಿತರ ಪರಿಹಾರ ಕೇಂದ್ರದ ಕಾಮಗಾರಿಗಳಿಗೆ ಭೂಮಿ ಪೂಜೆ

ದಾವಣಗೆರೆ, ಆ. 25 – ಇಲ್ಲಿಗೆ ಸಮೀಪದ ತುರ್ಚಘಟ್ಟದಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ 5.81 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಭೂಮಿ ಪೂಜೆ ನೆರವೇರಿಸಿದ್ದಾರೆ.

ಆಡಳಿತ ಕಚೇರಿ, ಅಧೀಕ್ಷಕರ ವಸತಿ ಗೃಹ, ಹಳೆ ಕಟ್ಟಡದ ದುರಸ್ತಿ, ನವೀಕರಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದೇಶ್ವರ, ಸುಮಾರು 6 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾಮಗಾರಿಗಳು ವರ್ಷದಲ್ಲಿ ಪೂರ್ಣಗೊಳ್ಳಬೇಕು. ಕಾಮಗಾರಿ ಗುಣಮಟ್ಟದಲ್ಲಿ ರಾಜೀ ಇಲ್ಲ ಎಂದರು.

ಈ ಕೇಂದ್ರದಲ್ಲಿ ನಿರ್ಗತಿಕರಿಗೆ ಆಶ್ರಯದ ಜೊತೆ ಕೃಷಿ, ಹೈನುಗಾರಿಕೆ ಸೇರಿದಂತೆ ಹಲವಾರು ಸ್ವಯಂ ಉದ್ಯೋಗ ತರಬೇತಿ ನೀಡಲಾಗುವುದು. ಆ ಮೂಲಕ ಹೊಸ ಬದುಕು ಕಟ್ಟಿಕೊಡಲಾಗುವುದು ಎಂದು ಸಂಸದರು ಹೇಳಿದರು.

ಭಿಕ್ಷುಕರು, ನಿರ್ಗತಿಕರ ಸೆಸ್ ಅನ್ನು ಪ್ರತಿ ಜಿಲ್ಲೆಯಲ್ಲೂ ಸಂಗ್ರಹಿಸಲಾಗುತ್ತಿದೆ. ಈ ಹಣದಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಡೆಸಲಾಗುತ್ತಿದೆ. ನಿರಾಶ್ರಿತರ ಕೇಂದ್ರಗಳಿಗೆ ಕಾಯಕಲ್ಪ ನೀಡುವ ರಾಜ್ಯ ಸರ್ಕಾರದ ಕೆಲಸ ಪ್ರೇರಣಾದಾಯಕವಾಗಿದೆ ಎಂದರು.

ನಿರಾಶ್ರಿತರು ದೇವರ ಮಕ್ಕಳಿದ್ದಂತೆ. ಅಂಥವರಿಗೆ ಸರ್ಕಾರ ಆಶ್ರಯ ನೀಡಿ 2-3 ವರ್ಷ ಸ್ವಯಂ (3ನೇ ಪುಟಕ್ಕೆ)



# ಸ್ವಾರ್ಥಕ್ಕೆ ದೇವರಿಗೆ ಪ್ರಾಣಿ ಬಲಿ : ಪಂಡಿತಾರಾಧ್ಯ ಶ್ರೀಗಳ ವ್ಯಾಕುಲತೆ

ಹಿಂಡಸ್ಕೆರೆ (ತಿಪಟೂರು ತಾ.), ಆ. 25- ಮೌಢ್ಯಗಳನ್ನು ತೊರೆದು ಜ್ಞಾನದ ಕಿಚ್ಚು ಹಚ್ಚುವ ಕೆಲಸವೇ ಮತ್ತೆ ಕಲ್ಯಾಣದ್ದು, ಇದು ರಾಜಕೀಯ ಪ್ರೇರೇಪಣೆಯ ಕಾರ್ಯಕ್ರಮ ವಲ್ಲ. ಇದಕ್ಕೆ ಅಪಾರ್ಥಗಳನ್ನು ಕಲ್ಪಿಸಿಕೊಳ್ಳುವ ಅಗತ್ಯವಿಲ್ಲ ಎಂದು ಸಾಣೇಹಳ್ಳಿ ಶ್ರೀ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮತ್ತೆ ಕಲ್ಯಾಣ ಸಮಿತಿ ಹಿಂಡಸ್ಕೆರೆ ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾ ಮಠದ ಸಂಯುಕ್ತಾಶ್ರಯದಲ್ಲಿ ನಡೆದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ನೇತೃತ್ವ ವಹಿಸಿ ಶ್ರೀಗಳು ಮಾತನಾಡಿದರು.

ಬಸವ ತತ್ವ ಅನುಯಾಯಿಗಳು ಹೋಮ, ಹವನಗಳನ್ನು ಮಾಡಿಸುವ ಅಗತ್ಯ ವಿಲ್ಲ. ಶುಭ ಕಾರ್ಯಗಳಲ್ಲಿ ನಾಲ್ಕಾರು ವಚನ ಹೇಳಿ ಕೊಂಡರೆ ಸಾಕು ಎಂದು ಹಿತ ನುಡಿದರು.

ಸ್ವಾರ್ಥ ತ್ಯಾಗ ಮಾಡಿ ಸಮಾಜದ ಅಭ್ಯುದಯಕ್ಕಾಗಿ ಹೋರಾಡಿದವರು ಶರಣರು. ನಾನು ಎನ್ನುವ ಅಹಂಕಾರ ಬಿಟ್ಟು, ನಾವು ಎಂಬ ಸದ್ಭಾವನೆ ಬೆಳೆಸಿಕೊಳ್ಳಬೇಕು. ಅಹಂ ಕಾರ, ಸ್ವಾರ್ಥವನ್ನು ಬಿಟ್ಟರೆ ಮಾತ್ರ ಸಂಘಟನೆ ಸಾಧ್ಯ ಎಂದು ಹೇಳಿದರು. ಯಾವ ದೇವರು ಪ್ರಾಣಿ ಬಲಿ ಕೇಳು ವುದಿಲ್ಲ. ಆದರೂ ನಮ್ಮ ಸ್ವಾರ್ಥವನ್ನು ಈಡೇರಿಸಿ ಕೊಳ್ಳಲು ಪ್ರಾಣಿ ಬಲಿ ಕೊಡುತ್ತಿದ್ದೇವೆ. ಇದು ಸಲ್ಲದು ಎಂದರು.

ಕಟ್ಟುವ ಗುಡಿಗಳು ಶಾಶ್ವತವಲ್ಲ ಎಂಬ ಅರಿವು ಬಹಳ ಜನರಿಗಿಲ್ಲ. ಗುಡಿ ಕಟ್ಟಿಸುವ ಬದಲು ಶಾಲೆ ಗಳನ್ನು ಕಟ್ಟಿಸುವ ಸಂಕಲ್ಪ ಮಾಡಬೇಕು. ಜನ ದೇವಸ್ಥಾನಕ್ಕೆ ಅನುದಾನ ಕೇಳುವ ಬದಲು ಶಾಲೆಗಳಿಗೆ ಅನುದಾನ ಕೇಳಬೇಕು ಎಂದು ತಿಳಿಸಿದರು.

'ಮಾದಾರ ಧೂಳಯ್ಯನ ಅರಿವಿನ ಪರಿಕಲ್ಪನೆ' ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಮಾತನಾಡಿ, ಗುರುವಿಗೆ ವಿಶೇಷವಾದ ಸ್ಥಾನ ಕೊಟ್ಟ ದೇಶ ನಮ್ಮದು. ನಮ್ಮನಾಡನ್ನುಮತ್ತೆಕಲ್ಯಾಣವಾಗಿಸಬೇಕೆನ್ನುವ ಕನಸನ್ನು ಹೊತ್ತು ಅದರ ಸಾಕಾರಕ್ಕಾಗಿ ಕಾರ್ಯಯೋಜನೆಯನ್ನು ಪಂಡಿತಾರಾಧ್ಯ



ಶ್ರೀಗಳು ರೂಪಿಸುತ್ತಿದ್ದಾರೆ ಎಂದರು.

ಇಂದಿನ ದಿನಮಾನಗಳಲ್ಲಿ ಉನ್ನತ, ಶ್ರೇಷ್ಠ, ದೇಶದ ಬೆನ್ನೆಲುಬು ಎನ್ನುವ ರೈತನನ್ನು ಕೀಳಾಗಿ ಕಾಣುವ ದುಃಸ್ಥಿತಿ ಬಂದಿದೆ. ನಮ್ಮ ಭಾಷೆ, ವೇಷ, ಊಟ, ಕೀಳೂ, ಮನೆ, ನಮ್ಮ ಮಕ್ಕಳು, ದೇಶವೂ ಕೀಳೂ ಎನ್ನುವಷ್ಟರ ಮಟ್ಟಿಗೆ ಅವಿವೇಕ ಹುಟ್ಟಿಕೊಂಡಿದೆ. ಈ ಅವಿವೇಕ ಹೋಗಲಾಡಿಸಲೆಂದೇ ಮತ್ತೆ ಕಲ್ಯಾಣ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮಾಜಿ ಶಾಸಕ ಕೆ. ಷಡಕ್ಷರಿ ಮಾತನಾಡಿ, ಶರಣರ ಸಂದೇಶವನ್ನು ಸಾರುವ ಬಹುಮುಖ್ಯವಾದ ಕಾರ್ಯ ಮತ್ತೆ ಕಲ್ಯಾಣ. ಉತ್ತಮ ಸಮಾಜದ ನಿರ್ಮಾಣಕ್ಕೆ ಇದು ಅತ್ಯಗತ್ಯವಾಗಿ ಬೇಕಾಗಿತ್ತು ಎಂದರು.

ವೈದ್ಯರಾದ ಶ್ರೀಧರ್ ಮಾತನಾಡಿ, 12 ನೇ ಶತಮಾನದ ಮೌಲ್ಯಗಳನ್ನು 10 ಶತಮಾನಗಳು ಕಳೆದರೂ ಮತ್ತೆ ಮತ್ತೆ ಹೇಳಬೇಕಾದುದು ನಮ್ಮ ದೌರ್ಭಾಗ್ಯವೇ ಸರಿ. ಶ್ರೀಮಂತ, ಸಂಸ್ಕೃತಿ ಹಿನ್ನೆಲೆ ಹೊಂದಿರುವ ದೇಶ ಇಂತಹ ಯಾಕೆ ಇಂಥ ದುಃಸ್ಥಿತಿಗೆ ಬಂದಿದೆ ಎಂದು ವಿಷಾದಿಸಿದರು.

ಸಾಣೇಹಳ್ಳಿಯ ಶಿವಸಂಚಾರ ಕಲಾ ತಂಡದ ಕಲಾವಿದರಾದ ಜ್ಯೋತಿ, ಹೆಚ್. ಎಸ್. ನಾಗರಾಜ್ ಮತ್ತು ತಂಡದವರು ವಚನಗೀತೆ ಹಾಡಿದರು. ರಾಜು ಲಕ್ಕಮುತ್ತೇನಹಳ್ಳಿ ಸ್ವಾಗತಿಸಿದರು. ಕೆ.ಎನ್. ರೇಣುಕಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲನಗೌಡ ಪಾಟೀಲ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ ಮನೆಗೆ ಶಾಸಕರ ಭೇಟಿ, ಸಾಂತ್ವನ



ಜಗಳೂರು, ಆ. 25- ತಾಲ್ಲೂಕಿನ ಮೆದಗಿನಕೆರೆ ಗ್ರಾಮದ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ ವಸತಿ ಶಾಲೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡ ನಾಗಲಘಟ್ಟ ಗ್ರಾಮದ ವಿದ್ಯಾರ್ಥಿ ಸುನೀಲ್ ಅವರ ಮನೆಗೆ ಶಾಸಕ ಎಸ್. ವಿ. ರಾಮಚಂದ್ರ ಭೇಟಿ ನೀಡಿ, ಸಾಂತ್ವನ ಹೇಳಿದರು.

ಇಂತಹ ದುರ್ಘಟನೆ ನಡೆಯಬಾರದಿತ್ತು. ಮಗನ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸಿ, ಪೋಷಕರಿಗೆ ಸಾಂತ್ವನ ಹೇಳಿ, ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಕೊಡಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂತೋಷ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಪಟ್ಟಣ ಪಂಚಾಯತ್ ಸದಸ್ಯ ಪಾಪಲಿಂಗಪ್ಪ, ಬಿಜೆಪಿ ಮುಖಂಡರಾದ ಮಾಗಡಿ ಮಂಜಣ್ಣ, ಅರವಿಂದ್ ಪಾಟೀಲ್ ಮತ್ತಿತರರಿದ್ದರು.

# ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳೆಯರು ಸ್ವಾವಲಂಬಿ



ಮಾಯಕೊಂಡ, ಆ.25 - ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಭಾರತ ರತ್ನ ನೀಡಬೇಕು ಎಂದು ಕೊಡಗನೂರು ಗ್ರಾಮ ಪಂಚಾಯತಿ ಅಧ್ಯಕ್ಷ ಎಸ್. ಸಿದ್ದಪ್ಪ ಆಗ್ರಹಿಸಿದರು.

ಸಮೀಪದ ಬೊಮ್ಮೇನಹಳ್ಳಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡ ಬೀದಿ ನಾಟಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆ ಮಹಿಳೆಯರಿಗೆ ಕಿರು ಉದ್ದಿಮೆ ಸ್ಥಾಪಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ಯೋಜನೆಯಿಂದ ಲಕ್ಷಾಂತರ ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಲೇವಾದೇವಿಗಾರರ, ಶ್ರೀಮಂತರ ಮನೆ ಬಾಗಿಲಿಗೆ ಅಲೆಯದೇ ಸ್ವಾಭಿಮಾನದಿಂದ ಬದುಕುವಂತೆ ಮಾಡಿದೆ ಎಂದರು.

ಸರ್ಕಾರಕ್ಕೆ ಸಮನಾಗಿ ಕೆಲಸ ಮಾಡಿ ನಾಡಿನ ಏಳಿಗೆಗೆ ಶ್ರಮಿಸುತ್ತಿರುವ ಪದ್ಮಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಭಾರತ ರತ್ನ ನೀಡಲು ಸರ್ಕಾರ ಶಿಫಾರಸ್ಸು ಮಾಡಬೇಕು ಎಂದರು.

ಶಿಕ್ಷಕ ನಾಗಪ್ಪ, ಮಹಿಳಾ ಸಬಲೀಕರಣಕ್ಕೆ ಅಗತ್ಯ ಕಾರ್ಯಕ್ರಮ ರೂಪಿಸಿರುವುದು ಮತ್ತು ಬೀದಿ ನಾಟಕಗಳ ಮೂಲಕ ಅರಿವು ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಮೇಲ್ವಿಚಾರಕಿ ವನಜಾಕ್ಷಿ ಮಾತನಾಡಿ, ಗ್ರಾಮಾಭಿವೃದ್ದಿ ಯೋಜನೆ, ಸಿಹೆಚ್‌ಸಿ ಕಾರ್ಯಕ್ರಮದಡಿ, ಇ-ಶ್ರಮ್, ಪಿಎಂ-ದಿಶಾ ಕಾರ್ಡ್‌ಗಳನ್ನು ನೋಂದಣಿ ಮಾಡಬೇಕು ಎಂದರು.

ಶ್ರುತಿ ಕಲಾ ತಂಡದ ಕಲಾವಿದರು ಆರೋಗ್ಯ, ನೈರ್ಮಲ್ಯದ ಅರಿವು ಮೂಡಿಸುವ, ಬೆಳೆ ವಿಮೆ, ಇ-ಶ್ರಮ್ ಕಾರ್ಡ್ ಬಳಕೆ, ಪಡೆಯುವ ವಿಧಾನ ಮದ್ಯಪಾನ, ತಂಬಾಕು ಬಳಕೆಯಿಂದಾಗುವ ಹಾನಿ ಬಗ್ಗೆ ನಾಟಕದ ಮೂಲಕ ಅರಿವು ಮೂಡಿಸಿದರು.

ಗ್ರಾಮ ಪಂಚಾಯತಿ ಸದಸ್ಯೆ ಸರಳಾಬಾಯಿ, ಯೋಜನೆಯ ಸಮನ್ವಯಾಧಿಕಾರಿ ಪ್ರತಿಭಾ, ಒಕ್ಕೂಟದ ಅಧ್ಯಕ್ಷೆ ಮೀರಾಬಾಯಿ, ಸೇವಾ ಪ್ರತಿನಿಧಿ ಮಂಜುಳಾ, ನಿವೃತ್ತ ಪೊಲೀಸ್ ಅಧಿಕಾರಿ ರುದ್ರಪ್ಪ ಉಪಸ್ಥಿತರಿದ್ದರು.

# ನಿಟ್ಟೂರು ಗ್ರಾಮದಲ್ಲಿ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ಮಲೇಬೆನ್ನೂರು, ಆ. 25 – ನಿಟ್ಟೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ, ದೇವರಬೆಳಕೆರೆ ವಲಯ ಮಟ್ಟದ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟವನ್ನು ನಿವೃತ್ತ ಸೈನಿಕರಾದ ಭಾನುವಳ್ಳಿಯ ಬೀರಪ್ಪ ಮತ್ತು ಕೆ.ಪಿ. ಚಂದ್ರಪ್ಪ ಅವರು ದೀಪ ಬೆಳಗಿಸಿ, ಉದ್ಘಾಟಿಸಿ ಶುಭ ಕೋರಿದರು.

ಈ ವೇಳೆ ಇಬ್ಬರೂ ಯೋಧರನ್ನು ಸನ್ಮಾನಿಸಿ, ಗೌರವಿಸಲಾಯಿತು. ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲೀಲಾ ಶಿವಕುಮಾರ್, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಗ್ರಾಮದ ಮುಖಂಡರಾದ ಕೆ. ಸಂಜೀವಮೂರ್ತಿ, ಎಸ್.ಜಿ. ಪ್ರಭುದೇವ್, ನಾಗೇಂದ್ರಪ್ಪ, ಬಸವಂತಪ್ಪ, ಆರ್.ಆರ್. ಮಠ, ಸಿದ್ಲಿಂಗಪ್ಪ, ಮಂಜುಳಾ, ಎಸ್‌ಡಿಎಂಸಿ ಉಪಾಧ್ಯಕ್ಷೆ ಶ್ರೀಮತಿ ಚಂದ್ರಕಲಾ, ಎ.ಎಸ್.ಐ. ಶ್ರೀನಿವಾಸ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಎಸ್‌ಡಿಎಂಸಿ ಅಧ್ಯಕ್ಷ ಹುರುಳಿ ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಸಂಜಯ್ ಮತ್ತು ವಿನಾಯಕ ಇವರು ಆಂಜನೇಯ ಸ್ವಾಮಿ ದೇವಸ್ಥಾನದಿಂದ ಶಾಲೆವರೆಗೆ ಕ್ರೀಡಾಜ್ಯೋತಿ ತಂದು ಪ್ರತಿಷ್ಠಾಪಿಸಿದರು.

ಚಿತ್ರಕಲಾ ಶಿಕ್ಷಕ ಭಾನುವಳ್ಳಿ ಪಿ. ನಾಗರಾಜ್ ಸ್ವಾಗತಿಸಿದರು. ಮುಖ್ಯ ಶಿಕ್ಷಕ ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಶಿವಾಲಯ್ಯ ನಿರೂಪಿಸಿದರೆ, ಶಿಕ್ಷಕ ಬಸಯ್ಯ ಮಠದ್ ವಂದಿಸಿದರು.

ದೇವರಬೆಳಕೆರೆಯಲ್ಲಿ ನಡೆದ ಓಟದ ಸ್ಪರ್ಧೆಗೆ ಶಾಸಕ ಎಸ್. ರಾಮಪ್ಪ ಚಾಲನೆ ನೀಡಿದರು. ನಂತರ ವಿಜೇತ ಅಭ್ಯರ್ಥಿಗಳಿಗೆ ಬಹುಮಾನ ನೀಡಿದರು.

ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

# 12 ರೈಲುಗಳ ವೇಳಾಪಟ್ಟಿ ಬದಲಾವಣೆ

1ನೇ ಪುಟದಿಂದ ನಿಲ್ಲಲಿದೆ.

ಹುಬ್ಬಳ್ಳಿ - ಬೆಂಗಳೂರು ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 12080, ಹುಬ್ಬಳ್ಳಿಯ ಬದಲು ಚಿಕ್ಕಜಾಜೂರಿನಿಂದ ಹೊರಡಲಿದೆ.

ಅರಸೀಕೆರೆ - ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 16213, ಅರಸೀಕೆರೆ ಬದಲು ಹರಿಹರದಿಂದ ಹೊರಡಲಿದೆ.

**ವಿಳಂಬ :** ಬೆಳಗಾವಿ - ಮೈಸೂರು ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 17325, ಬೆಳಗಾವಿಯಿಂದ 2 ಗಂಟೆ ತಡವಾಗಿ ಹೊರಡಲಿದೆ.

ಮೈಸೂರು - ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್ ಸಂಖ್ಯೆ 17326, ಮೈಸೂರಿನಿಂದ ಎರಡು ಗಂಟೆ ತಡವಾಗಿ ಹೊರಡಲಿದೆ.

ಯಶವಂತಪುರ - ಬಿಕನೇರ್ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 16587, ಯಶವಂತಪುರದಿಂದ 30 ನಿಮಿಷ ತಡವಾಗಿ ಹೊರಡಲಿದೆ.

**ಮಾರ್ಗ ಬದಲಾವಣೆ :** ಹರಿಹರ - ಹೊಸಪೇಟೆ ಡೈಲಿ ಪ್ಯಾಸೆಂಜರ್ ರೈಲು ಸಂಖ್ಯೆ 06246 ಮಾರ್ಗ ಬದಲಿಸಲಾಗಿದೆ. ಹರಿಹರ, ಅಮರಾವತಿ ಕಾಲೋನಿ ಮತ್ತು ತೆಲಗಿ ಮೂಲಕ ಚಲಿಸಲಿದೆ. ದಾವಣಗೆರೆ ಹಾಗೂ ತೋಳಹುಣಸೆ ನಿಲ್ದಾಣಗಳಿಗೆ ಬರುವುದಿಲ್ಲ.

ಮೈಸೂರು - ದಾದರ್ ಶರಾವತಿ ವೀಕ್ಲಿ ಎಕ್ಸ್‌ಪ್ರೆಸ್ ರೈಲು ಸಂಖ್ಯೆ 11036, ಬೀರೂರು, ಚಿಕ್ಕಜಾಜೂರು, ಬಳ್ಳಾರಿ ಬೈಪಾಸ್, ಹೊಸಪೇಟೆ ಹಾಗೂ ಹುಬ್ಬಳ್ಳಿ ನಿಲ್ದಾಣಗಳ ಮೂಲಕ ಚಲಿಸಲಿದೆ. ದಾವಣಗೆರೆ, ಹರಿಹರ, ರಾಣೇಬೆನ್ನೂರು ಹಾಗೂ ಹಾವೇರಿ ನಿಲ್ದಾಣಗಳಿಗೆ ಬರುವುದಿಲ್ಲ.

**ಅ.27ರ ಶನಿವಾರದ ಬದಲಾವಣೆ**

ವಾಸ್ಕೋ ಡ ಗಾಮಾ - ಯಶವಂತಪುರ ಎಕ್ಸ್‌ಪ್ರೆಸ್ ಸಂಖ್ಯೆ 17310 ಮಾರ್ಗ ಬದಲಿಸಲಾಗಿದೆ. ಈ ರೈಲು ಹಾವೇರಿ, ರಾಣೇಬೆನ್ನೂರು, ಹರಿಹರ ಹಾಗೂ ದಾವಣಗೆರೆ ನಿಲ್ದಾಣಗಳಿಗೆ ಬರುವುದಿಲ್ಲ. ಹುಬ್ಬಳ್ಳಿ, ಬಳ್ಳಾರಿ, ರಾಯದುರ್ಗ, ಚಿಕ್ಕಜಾಜೂರು ಹಾಗೂ ಬೀರೂರು ನಿಲ್ದಾಣಗಳ ಮೂಲಕ ಚಲಿಸಲಿದೆ.

# ಅಭಿವೃದ್ಧಿಯೇ ಸರ್ಕಾರದ ಗುರಿ : ಸಿಎಂ

(1ನೇ ಪುಟದಿಂದ) ಪೂಜಾರ ಅವರನ್ನು ಮುಂದೆಯೂ ಗೆಲ್ಲಿಸಿ ಎಂದು ಹೇಳಿದರು.

ಶಾಸಕ ಅರುಣಕುಮಾರ ಪೂಜಾರ ಮಾತನಾಡಿ, ನನಗೆ ಇಲ್ಲಿನ ಜನತೆ ಆಶೀರ್ವದಿಸಿದ್ದರಿಂದ ಇಬ್ಬರು ಮುಖ್ಯಮಂತ್ರಿಗಳ ಸಹಾಯ-ಸಹಕಾರದಿಂದ ಅತೀ ಹೆಚ್ಚು ಅಭಿವೃದ್ಧಿ ಮಾಡಿದ್ದೇನೆ. ಮುಂದೆಯೂ ಸಹ ನನಗೆ ಆಶೀರ್ವದಿಸಿ ಕ್ಷೇತ್ರವನ್ನು ಮಾದರಿಯಾಗಿಸಲು ಅವಕಾಶ ನೀಡುವಂತೆ ಹೇಳಿದರು.

ವಿವೇಕಾನಂದಾಶ್ರಮದ ಶ್ರೀ ಪ್ರಕಾಶಾನಂದ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು. ಆವರಗೊಳ್ಳದ ಶ್ರೀ ಓಂಕಾರೇಶ್ವರ ಸ್ವಾಮೀಜಿ, ಲಿಂಗದಹಳ್ಳಿ ಶ್ರೀ ವೀರಭದ್ರ ಸ್ವಾಮೀಜಿ, ಮಣಕೂರ ಸ್ವಾಮೀಜಿ, ಶಾಸಕರಾದ ರೇಣುಕಾಚಾರ್ಯ, ವಿರುಪಾಕ್ಷಪ್ಪ ಬಳ್ಳಾರಿ, ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ. ಬಣಕಾರ, ಅರಣ್ಯ ನಿಗಮದ ನಿರ್ದೇಶಕಿ ಭಾರತಿ ಜಂಬಗಿ, ಹರಿಹರ ಪಂಚಮಸಾಲಿ ಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ, ಶಿವಕುಮಾರ ನರಸಗೊಂಡರ, ಸೋಮಶೇಖರ್ ಗೌಡಶಿವಣ್ಣನವರ, ಎಸ್.ಎಸ್. ರಾಮಲಿಂಗಣ್ಣನವರ, ಜಿಪಂ ಮಾಜಿ ಸದಸ್ಯರಾದ ಮಂಗಳಗೌರಿ ಪೂಜಾರ, ಶಾಸಕರ ತಾಯಿ ಹಾಲಮ್ಮ ಮತ್ತಿತರರಿದ್ದರು.

ಗಂಗಾಜಲ ಚೌಡೇಶ್ವರಿ, ಬನಶಂಕರಿ, ಸಿದ್ದೇಶ್ವರ, ದೊಡ್ಡಪೇಟೆ ಬಸವೇಶ್ವರ ಸೇರಿದಂತೆ ನಗರದ ಎಂಟಕ್ಕೂ ಹೆಚ್ಚು ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಸಲಾಯಿತು. ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು. ಎಲ್ಲಾ ಸಮಾಜಗಳ ಅಧ್ಯಕ್ಷರನ್ನು ಗೌರವಿಸಲಾಯಿತು.

# ನಗರದಲ್ಲಿ ಇಂದು ಸಾಮೂಹಿಕ ವರಮಹಾಲಕ್ಷ್ಮಿ ಪೂಜೆ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಆಶ್ರಯದಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜಾ ಸಮಿತಿ, ದಾವಣಗೆರೆ 'ಬಿ' ವಲಯ ಹಾಗೂ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ಮತ್ತು ಜ್ಞಾನವಿಕಾಸ ಕೇಂದ್ರ ದಾವಣಗೆರೆ 'ಬಿ' ವಲಯ ಇವರುಗಳ ಸಹಯೋಗದಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಇಂದು ಶಿವಾಜಿ ಸರ್ಕಲ್ ಬಳಿಯ ಶ್ರೀ ನಿಮಿಷಾಂಬ ಸಭಾಭವನದಲ್ಲಿ ನಡೆಯಲಿದೆ.

ಬೆಳಿಗ್ಗೆ 8 ಗಂಟೆಗೆ ಪೂಜೆ ಮತ್ತು ಬೆಳಿಗ್ಗೆ 11 ಗಂಟೆಗೆ ಸಭೆ ನಡೆಯಲಿದೆ. ನಂತರ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ಹಾಗೂ ಶ್ರೀ ಮಾತೃಶ್ರೀ ಜ್ಞಾನವಿಕಾಸ ಕೇಂದ್ರ ಇವರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವುದು.

ಕಾರ್ಯಕ್ರಮವನ್ನು ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸುವರು. ಸೈಯದ್ ಚಾರ್ಲಿ ಅಧ್ಯಕ್ಷತೆ ವಹಿಸುವರು. ಶ್ರೀನಿವಾಸ ಹೆಚ್.ವಿ. ಧಾರ್ಮಿಕ ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ವಿ. ವಿಜಯಕುಮಾರ್ ನಾಗನಾಳ, ನಾಗರಾಜ್ ಹೆಚ್.ಎನ್., ಶ್ರೀಮತಿ ಪ್ರಮೀಳಮ್ಮ ಹೆಚ್., ಶ್ರೀಮತಿ ರೇಷ್ಮಾ ಹಂಸರಾಜ್, ಗೌಡ್ರು ಚನ್ನಬಸಪ್ಪ, ಇ.ಎಂ. ಮಂಜುನಾಥ್, ಶ್ರೀಮತಿ ರುದ್ರಮ್ಮ ಮಲ್ಲಿಕಾರ್ಜುನಪ್ಪ ಬಿರಾದಾರ್, ಎಂ. ದೊಡ್ಡಪ್ಪ ಆಗಮಿಸುವರು.

# ಗೋಧಿ, ಹಿಟ್ಟು ರಫ್ತು ನಿರ್ಬಂಧ

**1ನೇ ಪುಟದಿಂದ** ಪ್ರಧಾನ ನಿರ್ದೇಶನಾಲಯ ಅಧಿಸೂಚನೆ ಹೊರಡಿಸಲಿದೆ. ರಷ್ಯಾ ಹಾಗೂ ಉಕ್ರೇನ್ ನಡುವಿನ ಸಮರದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಗೋಧಿ ಬೆಲೆ ಏರಿಕೆಯಾಗಿದೆ. ಇದರ ಪರಿಣಾಮ ಭಾರತದಲ್ಲೂ ಕಾಣುತ್ತಿದೆ.

ದೇಶದ ಆಹಾರ ಭದ್ರತೆ ಕಾಯ್ದುಕೊಳ್ಳುವ ಸಲುವಾಗಿ ಗೋಧಿ ರಫ್ತಿನ ಮೇಲೆ ನಿರ್ಬಂಧ ಹೇರಲಾಗಿದೆ. 2022ರ ಏಪ್ರಿಲ್ - ಜುಲೈ ಅವಧಿಯಲ್ಲಿ ದೇಶದ ಗೋಧಿ ರಫ್ತು ಎರಡು ಪಟ್ಟು ಹೆಚ್ಚಾಗಿತ್ತು.

# ರಾಣೇಬೆನ್ನೂರು : ಗ್ರಾಮಾಂತರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಆ.24- ದಿನಾಂಕ 26ರ ಶುಕ್ರವಾರ ಬೆಳಿಗ್ಗೆ 10 ಘಂಟೆಯಿಂದ ಸಂಜೆ 6 ಘಂಟೆಯವರೆಗೆ ಕೋಡಿಯಾಲ-ಹೊಸಪೇಟೆ, ಕವಲೆತ್ತು, ನಲವಾಗಲು, ಮಾಕನೂರು, ನಾಗೇನಹಳ್ಳಿ, ಮುದೇನೂರು, ಹುಲಿಕಟ್ಟಿ, ನದಿಹರಳಹಳ್ಳಿ, ವಡೇರಾಯನಹಳ್ಳಿ ಗ್ರಾಮಗಳಿಗೆ ಮತ್ತು ಹರಿಹರ ಕುಡಿಯುವ ನೀರು ಸರಬರಾಜು ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಹೆಸ್ಕಾಂ ತಿಳಿಸಿದೆ.

# ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ತಯಾರಿಕೆ



ಗಣೇಶ ಮೂರ್ತಿಗಳಿಗೆ ಅಂತಿಮ ರೂಪ ನೀಡಲಾಗುತ್ತಿದೆ.

ಆ. 29 ರ ಸೋಮವಾರದ ವೇಳೆಗೆ ಎಲ್ಲಾ ಗಣೇಶ ಮೂರ್ತಿಗಳು ಸಂಪೂರ್ಣವಾಗಿ ಸಿದ್ದಗೊಳ್ಳಲಿವೆ ಎಂದು ಪ್ರಕಾಶಚಾರ್ 'ಜನತಾವಾಣಿ'ಗೆ ತಿಳಿಸಿದರು.

ಮಲೇಬೆನ್ನೂರು, ಆ.25- ದಿನಾಂಕ 31 ರ ಬುಧವಾರ ಗಣೇಶ ಚತುರ್ಥಿ ಹಬ್ಬ ಇರುವುದರಿಂದ ಎಲ್ಲೆಡೆ ಗಣೇಶ ಮೂರ್ತಿಗಳ ತಯಾರಿಕೆ ಭರದಿಂದ ಸಾಗಿದೆ.

ಮಲೇಬೆನ್ನೂರಿನಲ್ಲಿ ಕಳೆದ 4 ತಲೆಮಾರಿನಿಂದಲೂ ಗಣೇಶ ಮೂರ್ತಿಗಳನ್ನು ತಯಾರು ಮಾಡುತ್ತಾ ಬಂದಿರುವ ದಿ. ಕೃಷ್ಣಚಾರ್ ಕುಟುಂಬದವರಿಗೆ ಎಲ್ಲಿಲ್ಲದ ಬೇಡಿಕೆ ಇದೆ.

ಪ್ರತಿ ವರ್ಷವೂ ಪರಿಸರ ಸ್ನೇಹಿ ಗಣಪತಿಗಳನ್ನೇ ತಯಾರು ಮಾಡುವ ದಿ. ಕೃಷ್ಣಚಾರ್ ಅವರ ಮಕ್ಕಳಾದ ಕೇಶವಚಾರ್, ಮೌನೇಶ್ವರಚಾರ್, ಬ್ರಹ್ಮಚಾರ್, ಪ್ರಕಾಶ್‌ಚಾರ್, ಸುರೇಶ್‌ಚಾರ್ ಮತ್ತು ವಿನಾಯಕ ಇವರುಗಳು ವ್ಯವಹಾರ ದೃಷ್ಟಿಗಿಂತ ದೈವೀ ಭಕ್ತಿ ಹೊಂದಿದ್ದಾರೆ.

ಇವರು ತಯಾರು ಮಾಡುವ ಪರಿಸರ ಸ್ನೇಹಿ ಗಣೇಶ ಮೂರ್ತಿಗಳಿಗೆ ಹರಿಹರ ತಾಲ್ಲೂಕು ಅಷ್ಟೇ ಅಲ್ಲದೆ, ಚನ್ನಗಿರಿ, ಹೊನ್ನಾಳಿ, ಹಿರೇಕೆರೂರು, ರಾಣೇಬೆನ್ನೂರು, ಹರಪನಹಳ್ಳಿ ಮತ್ತು ದಾವಣಗೆರೆ ತಾಲ್ಲೂಕುಗಳಿಂದಲೂ ಸಾಕಷ್ಟು ಬೇಡಿಕೆ ಇದೆ.

ಈಗಾಗಲೇ 7 ಅಡಿ ಎತ್ತರದ 3 ಗಣೇಶ ಮೂರ್ತಿಗಳು ಸೇರಿದಂತೆ 5 ಅಡಿ ಎತ್ತರದ 10, ಮೂರೂವರೆ ಅಡಿ ಎತ್ತರದ 15, 3 ಅಡಿ ಎತ್ತರದ 20, 2 ಅಡಿ ಎತ್ತರದ 25 ಮತ್ತು ಒಂದು ಅಡಿಯಿಂದ 16 ಇಂಚು ಎತ್ತರದ 400

ಸರ್ಕಾರ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ವಿಚಾರದಲ್ಲಿ ಒಂದು ತಿಂಗಳು ಮುಂಚಿತವಾಗಿ ಸ್ಪಷ್ಟ ಸುತ್ತೋಲೆ ಹೊರಡಿಸಿದರೆ ನಮ್ಮ ಪರಿಸರ ಸ್ನೇಹಿ ಗಣಪತಿಗಳಿಗೆ ಇನ್ನೂ ಹೆಚ್ಚಿನ ಬೇಡಿಕೆ ಬರಲಿದೆ ಎಂದರು.


ನಾವು ಹಣಕ್ಕಿಂತ ಉತ್ತಮ ಸೇವೆಗೆ ಒತ್ತು ನೀಡಿ ಕಳೆದ 400 ವರ್ಷಗಳಿಂದ ನಮ್ಮ ಮನೆತನದವರು ಬಡಗಿ ಕೆಲಸದ ಜೊತೆಗೆ ಗಣೇಶ ಮೂರ್ತಿಗಳನ್ನು ಹದವಾದ ಮಣ್ಣಿನಿಂದಲೇ ತಯಾರು ಮಾಡುತ್ತಾ ಬಂದಿದ್ದಾರೆ.

ನಾವೂ ಆ ಕಾಯಕವನ್ನು ಮುಂದುವರೆಸಿದ್ದು, ಜೊತೆಗೆ ಕಟ್ಟಿಗೆಯ ರಥಗಳನ್ನು ನಿರ್ಮಿಸುತ್ತೇವೆ ಎಂದು ಶಿಲ್ಪಿ ಕೇಶವಚಾರ್ ತಿಳಿಸಿದರು.

# ಯವಲಟ್ಟಿಯಲ್ಲಿ ಇಂದು ಪುರಾಣ ಮುಕ್ತಾಯ

ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಹಮ್ಮಿಕೊಂಡಿದ್ದ ಶ್ರೀ ಸದ್ಗುರು ಸಿದ್ಧಾರೂಢರ ಪುರಾಣ ಪಾರಾಯಣವನ್ನು ಇಂದು ಸಂಜೆ 7 ಗಂಟೆಗೆ ಏರ್ಪಡಿಸಿರುವ ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮದಲ್ಲಿ ಮುಕ್ತಾಯಗೊಳಿಸಲಾಗುವುದೆಂದು ಶ್ರೀ ಯೋಗಾನಂದ ಸ್ವಾಮೀಜಿ ತಿಳಿಸಿದ್ದಾರೆ.

# ಜ್ವಲಂತ ಸಮಸ್ಯೆ ಬಗೆಹರಿಸದ ಶಾಸಕ ಇದೀಗ ಹಳ್ಳಿ ಕಡೆಗಿನ ಭೇಟಿ ಹಾಸ್ಯಾಸ್ಪದ



ಹರಪನಹಳ್ಳಿ, ಆ. 25- ರೈತರು, ಕಾರ್ಮಿಕರು ಸೇರಿದಂತೆ ತಾಲ್ಲೂಕಿನ ಜನಸಾಮಾನ್ಯರ ಜ್ವಲಂತ ಸಮಸ್ಯೆಗಳಿದ್ದು, ಈ ಬಗ್ಗೆ ಗಮನ ಹರಿಸದ ಕ್ಷೇತ್ರದ ಶಾಸಕರು, ಚುನಾವಣೆ ಹತ್ತಿರವಾಗುತ್ತಿದ್ದಂತೆ ಹಳ್ಳಿ ಕಡೆಗೆ ಭೇಟಿ ನೀಡುತ್ತಿರುವುದು ಹಾಸ್ಯಾಸ್ಪದ ಎಂದು ಕಾಂಗ್ರೆಸ್ ಮುಖಂಡ ಶಶಿಧರ್ ಪೂಜಾರ್ ವ್ಯಂಗ್ಯವಾಡಿದರು.

ಗುರುವಾರ ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಕರುಣಾಕರ ರೆಡ್ಡಿಯವರು ಕಳೆದ ನಾಲ್ಕು ವರ್ಷಗಳಿಂದ ಕ್ಷೇತ್ರದ ಕಡೆ ಮುಖ ಮಾಡದೇ ಅತಿಥಿ ಶಾಸಕರಂತೆ ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಿದ್ದವರು ಇದೀಗ ಚುನಾವಣೆ ಸಮೀಪಿಸುತ್ತಿದ್ದಂತೆ ಕ್ಷೇತ್ರದ ಜನರ ಮೇಲೆ ಎಲ್ಲಿಲ್ಲದ ಪ್ರೀತಿ ಹೆಚ್ಚಾಗಿದೆ ಎಂದು ದೂರಿದರು.

ಕಳೆದ ಎರಡು ವರ್ಷಗಳಿಂದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಗೈರಾಗುವ ಮೂಲಕ ತಾಲ್ಲೂಕಿನ ಜನರಿಗೆ ಅಪಮಾನ ಮಾಡಿದ ಶಾಸಕರು, ಸ್ವಾತಂತ್ರ್ಯ ದಿನಾಚರಣೆಗೂ ಮುನ್ನ ಹರ್ ಘರ್ ತಿರಂಗಾ ಯಾತ್ರೆಯಲ್ಲಿ ಶಾಲಾ-ಕಾಲೇಜಿನ ವಿದ್ಯಾರ್ಥಿಗಳನ್ನು ಕರೆದು ತಂದು ಅಭಿ ಯಾನ ಮಾಡಿದ್ದು, ಆ ಸಂದರ್ಭದಲ್ಲಿ ಇವರ ಬಳಿ ಎಷ್ಟು ಕಾರ್ಯಕರ್ತರು ಇದ್ದರು ಎಂಬುವುದು ತಾಲ್ಲೂಕಿನ ಜನರಿಗೆ ಗೊತ್ತಾಗಿದೆ ಎಂದು ಲೇವಡಿ ಮಾಡಿದರು.

ತಾಲ್ಲೂಕಿನಲ್ಲಿ ನಡೆದಿರುವ ಮತ್ತು ನಡೆಯುತ್ತಿರುವ ಬಹುತೇಕ ರಸ್ತೆ ಕಾಮಗಾರಿಗಳು ಕಳಪೆಯಿಂದ ಕೂಡಿದ್ದು, ಹಾರಕನಾಳು ಗ್ರಾಮದಿಂದ ಚನ್ನಹಳ್ಳಿ ತಾಂಡಾದವರೆಗಿನ ರಸ್ತೆ, ಲಕ್ಷ್ಮಿಪುರದಿಂದ-ಜಂಭುಲಿಂಗನ ಹಳ್ಳಿವರೆಗಿನ ರಸ್ತೆ ಹಾಗೂ ಕೋಡಿಹಳ್ಳಿಯಿಂದ ಕೂಲಹಳ್ಳಿಯವರೆಗಿನ ರಸ್ತೆ ಕಾಮಗಾರಿಗಳೇ ಇದಕ್ಕೆ ಸಾಕ್ಷಿ ಎಂದು ಹೇಳಿದರು.

ಶಾಸಕರು ತಮ್ಮ ಅಧಿಕಾರವಧಿಯಲ್ಲಿ ತಾಲ್ಲೂಕಿನ ಯಾವ ಗ್ರಾಮಕ್ಕೆ ಎಷ್ಟು ಜನರಿಗೆ ಆಶ್ರಯ ಮನೆಗಳನ್ನು ಕೊಟ್ಟಿದ್ದಾರೆ ಎಂಬುವುದನ್ನು ಬಹಿರಂಗ ಪಡಿಸಬೇಕೆಂದು ಸವಾಲು ಹಾಕಿದರು.


## ಹೊಂಬಳಗಟ್ಟಿ ಎ.ಎಂ. ಕೊಟ್ರಯ್ಯ ನಿಧನ



ಹರಪನಹಳ್ಳಿ ತಾಲ್ಲೂಕು ಹೊಂಬಳಗಟ್ಟಿ ಗ್ರಾಮದ ಕೆಎಂಎಫ್‌ನ ಮುಖ್ಯ ಕಾರ್ಯನಿರ್ವಾಹಕ

**ಶ್ರೀ ಎ.ಎಂ. ಕೊಟ್ರಯ್ಯ**

ಅವರು, ದಿನಾಂಕ 25.8.2022 ರ ಗುರುವಾರ ರಾತ್ರಿ 8.10ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.8.2022ರ ಶುಕ್ರವಾರ ಮಧ್ಯಾಹ್ನ 1.00 ಗಂಟೆಗೆ ಮೃತರ ಸ್ವಗ್ರಾಮ ಹರಪನಹಳ್ಳಿ ತಾಲ್ಲೂಕು, ಹೊಂಬಳಗಟ್ಟಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಮೃತರ ತಾಯಿ, ಧರ್ಮಪತ್ನಿ, ಮಕ್ಕಳು,
ಅಳಿಯಂದಿರು, ಸಹೋದರ- ಸಹೋದರಿಯರು,
ಬಂಧು-ಬಳಗ ಮತ್ತು ಸ್ನೇಹಿತರು.
ಮೊ : 9880409417


# ತಡೆಗೆ ಅಭಿಯಾನ

1ನೇ ಪುಟದಿಂದ ಕುಮಾರ್, ಪ್ರಾದೇ ಶಿಕ ಸಾರಿಗೆ ಅಧಿಕಾರಿ ಶ್ರೀಧರ್.ಕೆ, ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ, ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.


## 10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ನಿಂಗವ್ವರ ಬಸಪ್ಪನವರು
ಹೊಸಕುಂದವಾಡ
ಜನನ : 10.02.1954
ನಿಧನ : 26.08.2012

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ನಿಮ್ಮ ನೆನಪು ನಮಗೆ ಸದಾ
ಹಚ್ಚ ಹಸಿರು, ಸ್ಫೂರ್ತಿದಾಯಕ. ನಿಮ್ಮ ಪ್ರೀತಿ,
ಆರೈಕೆ, ನೆನಪುಗಳೇ ನಮಗೆ ದಾರಿದೀಪ.
ಪತ್ನಿ : ಶ್ರೀಮತಿ ಶಾರದಮ್ಮ ಬಸಪ್ಪನವರು
ಪುತ್ರ : ಪರಶುರಾಮ್ ಬಿ., ಉಪ ತಹಶೀಲ್ದಾರ್, ಕಂದಾಯ ಇಲಾಖೆ
ಸೊಸೆ : ಶ್ರೀಮತಿ ಕವಿತ ಪರಶುರಾಮ್
ಮೊಮ್ಮಕ್ಕಳು : ಕು. ಶ್ರೇಷ್ಠ ಪಿ.ರಾಮ್, ಚಿ. ವೈದಿಕ್ ಪಿ. ರಾಮ್
ಪುತ್ರಿ : ಶ್ರೀಮತಿ ಮಾಲತಿ, ಅಳಿಯ : ಹೆಚ್. ಶಿವಣ್ಣ,
ಮೊಮ್ಮಕ್ಕಳು : ಚಿ. ಕೌಶಿಕ್, ಕು. ಖುಷಿ,
ಪುತ್ರ : ಸಂತೋಷ್ ಬಿ.,
ಸೊಸೆ : ಶ್ರೀಮತಿ ಶೃತಿ, ಮೊಮ್ಮಗಳು : ಪುಟಾಣಿ ತನ್ವಿಕ


# ರಷ್ಯಾ ವಿರುದ್ಧ ಭಾರತದ ಮತ

1ನೇ ಪುಟದಿಂದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಒತ್ತಾಯಿಸುತ್ತಾ ಬಂದಿತ್ತು. 15 ಸದಸ್ಯರ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತ ಶಾಶ್ವತವಲ್ಲದ ಸದಸ್ಯವಾಗಿದೆ. ಭಾರತದ ಎರಡು ವರ್ಷಗಳ ಅವಧಿ ಡಿಸೆಂಬರ್‌ಗೆ ಅಂತ್ಯವಾಗಲಿದೆ.

# ಶ್ರಮದ ಗಳಿಕೆ, ಅದರ ಸದ್ಬಳಕೆ ಶರಣರ ಅರ್ಥಶಾಸ್ತ್ರವಾಗಿತ್ತು

## ಶಂಕರನಹಳ್ಳಿ 'ಮತ್ತೆ ಕಲ್ಯಾಣ'ದಲ್ಲಿ ದಾವಣಗೆರೆ ಶಿಕ್ಷಣ ಇಲಾಖೆ ಉಪಯೋಜನಾ ಸಮನ್ವಯಾಧಿಕಾರಿ ಡಾ. ಪುಷ್ಪಲತಾ



ಅರಸೀಕೆರೆ ಆ.25- ಹನ್ನೆರಡನೇ ಶತಮಾನದ ಮುಖ್ಯ ಗ್ರಹಿಕೆಗಳು ಕಾಯಕ ಮತ್ತು ದಾಸೋಹ. ಶ್ರಮವಹಿಸಿ ದುಡಿಮೆಯನ್ನು ಮಾಡಿ ಜೀವನ ನಿರ್ವಹಣೆ ಮಾಡುವುದಕ್ಕೆ ಒತ್ತುಕೊಟ್ಟ ವರು ಶರಣರು. ಗಳಿಕೆ ಮತ್ತು ಅದರ ಸದ್ಬಳಕೆ ಶರಣರ ಅರ್ಥಶಾಸ್ತ್ರವಾಗಿತ್ತು ಎಂದು ದಾವಣಗೆರೆಯ ಶಿಕ್ಷಣ ಇಲಾಖೆ ಉಪಯೋಜನಾ ಸಮನ್ವಯಾಧಿಕಾರಿ ಡಾ. ಪುಷ್ಪಲತಾ ನುಡಿದರು.

ಇಲ್ಲಿನ ಮತ್ತೆ ಕಲ್ಯಾಣ ಸಮಿತಿ – ಕೆ. ಶಂಕರನ ಹಳ್ಳಿ ಮತ್ತು ಸಾಣೇಹಳ್ಳಿ ಶ್ರೀ ತರಳ ಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ 'ಶರಣರ ಜೀವನ ಮೌಲ್ಯಗಳು' ಕುರಿತು ಅವರು ಉಪನ್ಯಾಸ ನೀಡಿದರು.

ದಾಸೋಹವು ಸಮಾಜಮುಖಿ ಚಿಂತನೆಯ ಒಂದು ಭಾಗವೇ ಆಗಿತ್ತು. ವ್ಯಕ್ತಿ ಮತ್ತು ಸಮಾಜ ಇವೆರಡಕ್ಕೂ ಸಮಾನ ಮಾನ್ಯತೆಯನ್ನು ಕೊಟ್ಟವರು ಶರಣರು. ಹಸಿದವರಿಗೆ ಅನ್ನ, ಅರಿವಿಗೆ ಜ್ಞಾನದ ಕಾರ್ಯಗಳನ್ನು ಮಹಾರಾಜ ಮಾಡಲಿ ಅಂತ ಕಾಯುತ್ತಾ ಕುಳಿತುಕೊಳ್ಳದೇ, ತಾವೇ ಸ್ವತಃ ಅದರಲ್ಲಿ ತೊಡಗಿಸಿಕೊಂಡವರು. ತಮ್ಮ ಕಾಯಕದಿಂದ ಬಂದ ಆದಾಯವನ್ನು ದಾಸೋಹ ರೂಪದಲ್ಲಿ ಏಕೆ ನೀಡಬೇಕೆಂದು ಜನರಿಗೆ ಮನವರಿಕೆ ಮಾಡಿಕೊಟ್ಟವರು.

ಹೀಗಾಗಿ ಅವರ ಬದುಕು ಮೌಲ್ಯವಾಗಿತ್ತು. ಶರಣರ ವಿಚಾರಗಳು ಸಾರ್ವತ್ರಿಕ, ಕಾಲಾತೀತ, ದೇಶಾತೀತ. ತಮ್ಮ ಅನುಭವ ಹಾಗೂ ಅನುಭಾವ ವನ್ನು ಹಂಚಿಕೊಂಡಿದ್ದು ದೈವದ ಜೊತೆಯಲ್ಲಿ. ಅಹಂಕಾರಕ್ಕೆ ಆಸ್ಪದವನ್ನು ಕೊಡಲಿಲ್ಲ. ಸಜ್ಜನಿಕೆಯ ಸಹಜ ಶೈಲಿಯನ್ನು ಬದುಕಿನಲ್ಲಿ ರೂಢಿಸಿಕೊಂಡರು ಎಂದರು.

ನೇತೃತ್ವ ವಹಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಶರಣರು ಹೇಗೆ ಹೇಗೋ ಬದುಕಿದವರಲ್ಲ. ಅವರು ನಿಶ್ಚಿತ ಗುರಿಯನ್ನಿಟ್ಟುಕೊಂಡು ಶಿಸ್ತುಬದ್ಧವಾಗಿ ಬದುಕಿದ ವರು. ಕಾಯಕದಿಂದ ಬಂದ ಆದಾಯದಲ್ಲಿ ತಾವೂ ಬದುಕಿ, ಇತರರಿಗೂ ದಾಸೋಹ ಮಾಡಿ ತೋರಿಸಿದರು.

ವಿಷಾದದ ಸಂಗತಿ ಎಂದರೆ ಇವತ್ತು ಒಳ್ಳೆಯ ಕೆಲಸ ಮಾಡಿದರೆ ಹೊಟ್ಟೆಕಿಚ್ಚು ಪಡುವವರಿದ್ದಾರೆ. ಅಂತಹ ಸಂದರ್ಭದಲ್ಲಿ ವಿಮುಖರಾಗಬಾರದು. ಶ್ರೇಷ್ಠವಾದ ಸ್ಥಾನದಲ್ಲಿದ್ದವರು ಅನಾವಶ್ಯಕವಾಗಿ ಸಿಟ್ಟು ಮಾಡಿಕೊಳ್ಳದೇ ಪ್ರೀತಿಯನ್ನು ತೋರಿಸಿ ಮೈದಡವಿ ತಪ್ಪುಗಳನ್ನು ತಿದ್ದುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಹಾರನಹಳ್ಳಿ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಯಾವುದೇ ಧರ್ಮದಲ್ಲಿ ನೋಡಿದರೂ ಕಡಿ, ಬಡಿ, ಹೊಡಿ ಎನ್ನುವಂತಹ ಪರಿಸ್ಥಿತಿ ಇದೆ. ಯಾವ ಧರ್ಮದಲ್ಲಿ ಹಿಂಸೆ, ಕ್ರೌರ್ಯ ಇರುತ್ತದೋ ಅದು ಧರ್ಮವೇ ಅಲ್ಲ ಎಂದರು.

ಮಾನವೀಯ ಮೌಲ್ಯ ಮುಖ್ಯವಾದುದು ಎನ್ನುವುದನ್ನು ಬಸವಾದಿ ಶರಣರು ಜಗತ್ತಿಗೇ ಸಾರಿ ಹೇಳಿದ್ದಲ್ಲದೇ, ಅದರಂತೆ ನಡೆದು ತೋರಿಸಿದರು. ಶರಣರು ತಳವರ್ಗದ ಸಮೂಹವನ್ನೇ ಅನುಭವ ಮಂಟಪವನ್ನಾಗಿ ಮಾಡಿಕೊಂಡರು. ಆ ಮೂಲಕ ಇಂದಿನ ಪ್ರಜಾಪ್ರಭುತ್ವಕ್ಕೆ ಅಂದೇ ಕಾಣಿಕೆ ಕೊಟ್ಟು ಹೋಗಿದ್ದಾರೆ ಎಂದರು.

ಸಾನ್ನಿಧ್ಯ ವಹಿಸಿದ್ದ ಮಾಡಾಳು ಮಠದ ಶ್ರೀ ರುದ್ರಮುನಿ ಸ್ವಾಮಿಗಳು ಮಾತನಾಡಿ, ಶ್ರೀ ಪಂಡಿತಾರಾಧ್ಯ ಸ್ವಾಮೀಜಿಗಳವರು ತಿಂಗಳ ಕಾಲ 'ಮತ್ತೆ ಕಲ್ಯಾಣ' ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಾ ಬಂದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರಂಭದಲ್ಲಿ ಸಾಣೇಹಳ್ಳಿಯ ಶಿವಸಂಚಾರದ ಕೆ.ಜ್ಯೋತಿ, ಹೆಚ್. ಎಸ್. ನಾಗರಾಜ್ ಮತ್ತು ತಬಲಾ ಸಾಥಿ ಶರಣ್ ವಚನ ಗೀತೆಗಳನ್ನು ಹಾಡಿದರು. ಸಾಣೇಹಳ್ಳಿಯ ಶಿವಸಂಚಾರದ ಕಲಾವಿದರು ವಚನ ನೃತ್ಯರೂಪಕ ನೀಡಿದರು. ಎಸ್. ವಿ. ಕುಮಾರ್ ಸ್ವಾಗತಿಸಿ, ವಂದಿಸಿದರೆ, ನರಸಿಂಹಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಮಾಗನೂರು ಬಸಪ್ಪ ಶಾಲೆ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ



ದಾವಣಗೆರೆ, ಆ. 25- ನಗರದ ಮಾಗನೂರು ಬಸಪ್ಪ ಸಂಯುಕ್ತ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಹ್ಯಾಂಡ್‌ಬಾಲ್, ನೆಟ್‌ಬಾಲ್, ಬಾಸ್ಕೆಟ್ ಬಾಲ್ ಕ್ರೀಡೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಶಾಲಾ ಮುಖ್ಯಸ್ಥ ಎಸ್. ಮಂಜುನಾಥ, ಎಸ್.ಆರ್. ಶಿರಗಂಬಿ, ಶ್ರೀಮತಿ ಕುಸುಮ ಎ.ಎಸ್. ಉಪಸ್ಥಿತರಿದ್ದು, ಪ್ರಶಸ್ತಿ ಪತ್ರ ಹಾಗೂ ಪದಕ ವಿತರಿಸಿ, ಶುಭ ಹಾರೈಸಿದರು.

# ತಾಲ್ಲೂಕು ಮಟ್ಟಕ್ಕೆ ಕುಂಬಳೂರು ವಿದ್ಯಾರ್ಥಿಗಳು ಆಯ್ಕೆ



ಮಲೇಬೆನ್ನೂರು, ಆ.25 - ದೇವರಬೆಳಕೆರೆಯಲ್ಲಿ ನಡೆದ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾ ಕೂಟದಲ್ಲಿ ಕುಂಬಳೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳನ್ನು ಎಸ್‌ಡಿಎಂಸಿ ಅಧ್ಯಕ್ಷ ಹೆಚ್. ಪರಮೇಶ್ವರಪ್ಪ, ದೈಹಿಕ ಶಿಕ್ಷಕ ಗೋವಿಂದಪ್ಪ ಅಭಿನಂದಿಸಿದ್ದಾರೆ.

# ಪವರ್ ಲಿಫ್ಟಿಂಗ್: ಸರ್ಕಾರಿ ಕಾಲೇಜು ವಿದ್ಯಾರ್ಥಿನಿಯರ ಮೇಲುಗೈ



ದಾವಣಗೆರೆ ಆ.25- ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ವಿ. ಮುಕ್ತಿ ಅವರು 48 ಕೆಜಿ ವಿಭಾಗದಲ್ಲಿ, 195 ಕೆಜಿ ಭಾರ ಎತ್ತುವುದರ ಮೂಲಕ ಚಿನ್ನದ ಪದಕ ಗಳಿಸಿ, 'ಕರ್ನಾಟಕದ ಬಲಿಷ್ಠ ಮಹಿಳೆ' ಎಂಬ ಬಿರುದನ್ನು ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಪವರ್ ಲಿಫ್ಟಿಂಗ್ ಅಸೋಸಿ ಯೇಷನ್ ಮತ್ತು ಶ್ರೀ ಸಾಯಿ ಫಿಟ್ನೆಸ್ ಸಹಯೋಗದಲ್ಲಿ ಕಳೆದ 13 ಮತ್ತು 14 ರಂದು ನಡೆದ ಈ ಸ್ಪರ್ಧೆಯಲ್ಲಿ, ಕಾಲೇಜಿನ ಸೌಂದರ್ಯ ರಾಯ್ಕರ್ 64 ಕೆಜಿ ವಿಭಾಗದಲ್ಲಿ 170 ಕೆಜಿ ಎತ್ತುವುದರ ಮೂಲಕ ಚಿನ್ನದ ಪದಕ ಪಡೆದರೆ, ಅನುಷಾ ಬಂಡಗಾರ್ 48 ಕೆಜಿ ವಿಭಾಗದಲ್ಲಿ 125 ಕೆಜಿ ಎತ್ತಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ. ಯು. ಅದಿತಿ 58 ಕೆಜಿ ವಿಭಾಗದಲ್ಲಿ 125 ಕೆಜಿ ಎತ್ತಿ, ಬೆಳ್ಳಿ ಪದಕವನ್ನು ಜಯಿಸಿದ್ದಾರೆ.

**ಚಿನ್ನದ ಪದಕ ಪಡೆದ ಮುಕ್ತಿ 'ಕರ್ನಾಟಕದ ಬಲಿಷ್ಠ ಮಹಿಳೆ'**

ಸೆಪ್ಟೆಂಬರ್‌ನಲ್ಲಿ ಅಸ್ಸಾಂನಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಈ ಎಲ್ಲ ಕ್ರೀಡಾಪಟುಗಳು ಆಯ್ಕೆ ಆಗಿರುತ್ತಾರೆ. ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಕ್ರೀಡಾ ಸಮಿತಿ ಸದಸ್ಯರುಗಳಾದ ಪ್ರೊ. ಭೀಮಣ್ಣ, ಪ್ರಾಂಶುಪಾಲ ಡಾ. ಅಂಜನಪ್ಪ ಎಸ್. ಆರ್., ಸುಣಗಾರ, ಗಿರಿಸ್ವಾಮಿ, ನಾರಾಯಣಸ್ವಾಮಿ, ಸದಾಶಿವ, ವೆಂಕಟೇಶ್‌ಬಾಬು, ಷಣ್ಮುಖ, ಜ್ಯೋತಿ, ವ್ಯವಸ್ಥಾಪಕರಾದ ಗೀತಾದೇವಿ, ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ರೇಖಾ ಎಂ. ಆರ್ ಅಭಿನಂದಿಸಿದ್ದಾರೆ.

# ಗುತ್ತಿಗೆದಾರರು ಸಾಕ್ಷಿ ನೀಡಿದರೆ ತನಿಖೆಗೆ ಅನುಮತಿ

**(1ನೇ ಪುಟದಿಂದ)** ಸಂಬಂಧಿಸಿದಂತೆ ಸುದೀರ್ಘ ಚರ್ಚೆ ಮಾಡಿದ್ದೇವೆ ಎಂದಿದ್ದಾರೆ.

ಇದು ಅವರು ಮಾಡಿರುವ ಆರೋಪ ರಾಜ್ಯದ ಮಾನ ಹೋಗುವ ಪ್ರಶ್ನೆ. ಅವರು ಅಧಿಕೃತ ದಾಖಲೆ ನೀಡಿದರೆ ಒಳ್ಳೆಯದು. ಗಾಳಿಯಲ್ಲಿ ಗುಂಡು ಹೊಡೆಯುವುದನ್ನು ಬಿಟ್ಟು ಮುಖ್ಯಮಂತ್ರಿ ಮತ್ತು ಸರ್ಕಾರದ ಮೇಲೆ ಅನುಮಾನಗಳಿದ್ದರೆ, ಅವರು ನೇರವಾಗಿ ಲೋಕಾಯುಕ್ತಕ್ಕೆ ಇಲ್ಲವೇ ನ್ಯಾಯಾಲಯಕ್ಕೆ ಹೋಗಿ ತನಿಖೆಗೆ ಕೋರಲಿ ಎಂದರು.

224 ಶಾಸಕರು ಭ್ರಷ್ಟರು ಎಂದರೆ ಏನರ್ಥ? ಅವರ ಹತ್ರ ದಾಖಲೆ ಇದ್ದರೆ ದಾಖಲೆ ಕೊಡಲಿ, ಸುಮ್ಮನೆ ಆರೋಪ ಮಾಡುವುದರಿಂದ ಏನು ಬರುತ್ತದೆ? ಲೋಕಾಯುಕ್ತಕ್ಕೆ ಕೊಡಲಿ. ಯಾರು ಭ್ರಷ್ಟರು ಅಂತ ಸಾಬೀತು ಪಡಿಸಲಿ, ರಾಜ್ಯದಲ್ಲಿ ಆರೋಪ ಮಾಡುವುದಕ್ಕೆಲ್ಲ ತನಿಖೆ ಮಾಡಲು ಆಗುವುದಿಲ್ಲ ಎಂದರು.

ಕೆಂಪಣ್ಣನವರು ಕಂಟ್ರಾಕ್ಟರ್ ಆಗಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಮಾಹಿತಿ ಸಿಕ್ಕಿಲ್ಲ. ಅವರ ಬಳಿ ಯಾರು ಹಣ ಕೇಳಿದ್ದಾರೆ ಅಂತ ಗೊತ್ತಿಲ್ಲ. ಮುಖ್ಯಮಂತ್ರಿ ಮೇಲೆ ನಂಬಿಕೆ ಇಲ್ಲ ಅಂದರೆ ಹೈಕೋರ್ಟ್‌ಗೆ ದೂರು ಸಲ್ಲಿಸಲಿ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆರೋಪ ಮಾಡುತ್ತಿದ್ದರೆ ಒಳ್ಳೆಯದಲ್ಲ ಎಂದರು.

ಭ್ರಷ್ಟಾಚಾರವು ಸಿದ್ದರಾಮಯ್ಯ ಕಾಲದಲ್ಲಿ ಆಮೆ ವೇಗದಲ್ಲಿ ಇತ್ತು ಅಂತ ಹೇಳಿದ್ದರು. ಈಗ ವೇಗ ಹೆಚ್ಚಿದೆ ಅಂತ ಹೇಳಿದ್ದಾರೆ. ಅವರೇ ಭ್ರಷ್ಟಾಚಾರ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

# ಬಿಐಇಟಿಯ ಎಂಸಿಎ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ದಾವಣಗೆರೆ, ಆ. 25 - ನಗರದ ಬಿಐಇಟಿ ಕಾಲೇಜಿನ ಎಂಸಿಎ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಯುಬಿಡಿಟಿ ಕಾಲೇಜಿನ ಪ್ರಾಧ್ಯಾಪಕ ಡಾ.ಎನ್. ವೀರಪ್ಪ ಉದ್ಘಾಟಿಸಿದರು. ಸಭೆಯಲ್ಲಿ ಬಿಐಇಟಿ ಎಂಸಿಎ ವಿಭಾಗದ ಮುಖ್ಯಸ್ಥ ಡಾ. ಎಂ. ಪ್ರಸಾದ್ ಹಾಗೂ ಸಾಧಿಕ್, ಡಾ. ಬಿ.ಬಿ. ಶಂಕರಗೌಡ, ಎಂ. ಗೀತಾ, ಪ್ರಿಯ, ಯಶೋಧ, ಶೃತಿ, ಸಿಂಧು, ಎಂ.ಪಿ.ನಟರಾಜ್, ಅಲಿ ಮತ್ತು ಶಿವಕುಮಾರ್ ಉಪಸ್ಥಿತರಿದ್ದರು.

# ಕಂದಾಯ ಭೂಮಿಯ ಕೃಷಿ ಚಟುವಟಿಕೆ 'ಕಬಳಿಕೆ' ಅಲ್ಲ

**(1ನೇ ಪುಟದಿಂದ)** ಪದದಿಂದ ಹೊರಗಿಡಲಾಗುವುದು ಎಂದರು.

ಯಾಕೆಂದರೆ ಗ್ರಾಮೀಣ ಭಾಗಗಳಲ್ಲಿ ರೈತರು ಹಲವು ಕಾರಣಗಳಿಂದ ಜಮೀನನ್ನು ಸ್ವಾಧೀನದಲ್ಲಿಟ್ಟುಕೊಂಡಿರಬಹುದು. ಆದರೆ ಈ ಕಾರಣಕ್ಕಾಗಿಯೇ ಅವರನ್ನು ಭೂ ಕಬಳಿಕೆದಾರರು ಎಂದು ಗುರುತಿಸುವುದು ಸರಿಯಲ್ಲ ಎಂದು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದರು.

ಹೀಗಾಗಿ ಇನ್ನು ಮುಂದೆ ಮಹಾನಗರ ಪಾಲಿಕೆ ಮತ್ತು ನಗರ ಪ್ರದೇಶಗಳಲ್ಲಿ ಭೂ ಒತ್ತುವರಿ ಪ್ರಕರಣ ನಡೆದರೆ ಒತ್ತುವರಿ ಮಾಡಿದವರನ್ನು ಭೂ ಕಬಳಿಕೆದಾರರು ಎಂದು ಪರಿಗಣಿಸುವುದಾಗಿ ಅವರು ವಿವರಿಸಿದರು.

# ಸೆ.12ರಿಂದ ಮಳೆಗಾಲದ ಅಧಿವೇಶನಕ್ಕೆ ಸಮ್ಮತಿ

**(1ನೇ ಪುಟದಿಂದ)** ಕೆಪಿಎಸ್‌ಸಿಯಲ್ಲಿ ಡಿ ಗ್ರೂಪ್ ನೌಕರರ ನೇಮಕಾತಿ ಸಂದರ್ಭದಲ್ಲಿ ಮೌಖಿಕ ಸಂದರ್ಶನ ಇನ್ನುಮುಂದೆ ಇರುವುದಿಲ್ಲ. ರಾಜ್ಯ ಸರ್ಕಾರ ಸಿ ಮತ್ತು ಡಿ ದರ್ಜೆ ನೌಕರರ ನೇಮಕಾತಿ ಸಂದರ್ಭದಲ್ಲಿ ಇದನ್ನು ಪಾಲನೆ ಮಾಡುತ್ತಿಲ್ಲ. ಕೆಪಿಎಸ್‌ಸಿ ಕಾಯ್ದೆಗೆ ತಿದ್ದುಪಡಿ ತಂದು ಈ ಮೌಖಿಕ ಸಂದರ್ಶನವನ್ನು ಈ ವರ್ಗದ ನೌಕರರ ನೇಮಕಾತಿ ಸಂದರ್ಭದಲ್ಲಿ ಕೈಬಿಡಲಾಗುವುದು ಎಂದರು.

ರಾಜ್ಯದಲ್ಲಿ ಹೊಸತಾಗಿ 4,244 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ರಾಜ್ಯ ಪ್ರಾರಂಭಿಸುತ್ತಿರುವ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ದೊರೆಯುವುದಿಲ್ಲ ಎಂದವರು ಹೇಳಿದ್ದಾರೆ.

ಸೇನೆಯಲ್ಲಿ ಸೇವೆ ಸಲ್ಲಿಸುವಾಗಲೇ ಸೈನಿಕರು ಮೃತಪಟ್ಟರೆ ಅವರ ಕುಟುಂಬದ ಒಬ್ಬರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಹುದ್ದೆ ನೀಡಲು ಸಭೆ ಸಮ್ಮತಿಸಿದೆ.

ರಾಜ್ಯದಲ್ಲಿ ಸೇವೆಯಲ್ಲಿದ್ದು, ಮೃತಪಟ್ಟವರ ಸಂಖ್ಯೆ 400 ಮಂದಿ ಇದ್ದು, ಅದರಲ್ಲಿ 200 ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ದೊರೆತಿದೆ.

ಉಳಿದ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗುವುದು. ಇದುವರೆಗೂ ನೀಡುತ್ತಿದ್ದ ಇತರೆ ಸೌಲಭ್ಯ, ಇನ್ನು ಮುಂದೆ ನೀಡುವುದಿಲ್ಲ ಎಂದು ಹೇಳಿದರು.

ವಿದ್ಯಾನಿಧಿ ಯೋಜನೆಯಡಿ ರೈತರ ಮಕ್ಕಳಿಗೆ ಓದಲು ನೆರವು ನೀಡಲಾಗುತ್ತಿತ್ತು.ಇದನ್ನೇ ಇನ್ನು ಮುಂದೆ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲು ಸಂಪುಟ ಸಭೆ ತೀರ್ಮಾನಿಸಿದೆ ಎಂದರು.

ಈ ವರ್ಷದಿಂದಲೇ ಕೃಷಿ ಕಾರ್ಮಿಕರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯ ನೆರವು ದಕ್ಕಲಿದೆ ಎಂದು ಇದೇ ಸಂದರ್ಭದಲ್ಲಿ ಅವರು ಸ್ಪಷ್ಟಪಡಿಸಿದರು.

# ವಿಜ್ಞಾನ ಪ್ರಗತಿಗೆ ಕರ್ನಾಟಕ ಸಂಸ್ಥೆಯ ಕೇಂದ್ರದ ಉದ್ಘಾಟನೆ

ದಾವಣಗೆರೆ, ಆ. 25- 'ವಿಜ್ಞಾನ ಪ್ರಗತಿಗೆ ಕರ್ನಾಟಕ ಸಂಸ್ಥೆ. ಬೆಂಗಳೂರು' (The Karnataka Association for Advancement of science. Bangalore) ಇದರ ದಾವಣಗೆರೆ ಕೇಂದ್ರದ ಉದ್ಘಾಟನಾ ಕಾರ್ಯಕ್ರಮ ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿನ ಶ್ರೀ ಬಸವೇಶ್ವರ ಸೆಮಿನಾರ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರೂ, ಬೆಂಗಳೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಡಾ.ಕೆ. ಸಿದ್ದಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ 26ರ ಬೆಳಿಗ್ಗೆ 10.30ಕ್ಕೆ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದಾವಣಗೆರೆ ವಿವಿ ಉಪ ಕುಲಪತಿ ಡಾ.ಬಿ.ಡಿ. ಕುಂಬಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಬಿಐಇಟಿ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಉಪಸ್ಥಿತರಿರಲಿದ್ದಾರೆ ಎಂದರು.

ಇದೇ ವೇಳೆ ಐ.ಐ.ಎಸ್.ಸಿ ಹಿರಿಯ ಪ್ರೊಫೆಸರ್ ರವಿ ನಂಜುಂಡಯ್ಯ, ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ನ ಮಾಜಿ ನಿರ್ದೇಶಕ ಡಾ.ಕೆ.ಪಿ. ಪುಟ್ಟುರಾಯ ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ವಿಜ್ಞಾನ ಪ್ರಗತಿಗಾಗಿ ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಸಂಸ್ಥೆ ಆರಂಭವಾಗಿದ್ದು, ಖ್ಯಾತ ವಿಜ್ಞಾನಿ, ಭಾರತ ರತ್ನ ಪ್ರೊ.ಸಿ.ಎನ್. ಆರ್. ರಾವ್ ಸಂಸ್ಥೆಯ ಮೊದಲ ಅಧ್ಯಕ್ಷರಾಗಿದ್ದರು. ಪ್ರಸ್ತುತ ಬೆಂಗಳೂರಿನ ಲ್ಲಿರುವ ಸಂಸ್ಥೆಯ ಶಾಖೆ ದಾವಣಗೆರೆಯಲ್ಲಿ ಆರಂಭವಾಗಲಿದೆ. ಮುಂದಿನ ದಿನಗಳಲ್ಲಿ ಮಂಗಳೂರು, ಬೆಳಗಾಂ, ಗುಲಬರ್ಗಾ ಮುಂತಾದ ಕಡೆಯೂ ಆರಂಭವಾಗಲಿದೆ ಎಂದು ಹೇಳಿದರು.

ಪರಿಣಿತರಿಂದ ವಿಶೇಷ ಉಪನ್ಯಾಸ, ವಿಚಾರ ಸಂಕಿರಣ, ವಸ್ತು ಪ್ರದರ್ಶನ, ವಿಜ್ಞಾನ-ತಂತ್ರಜ್ಞಾನದ ಅರಿವು ಮೂಡಿಸುವುದು, ಸಂಶೋಧನಾ ಯೋಜನೆ ಕೈಗೊಳ್ಳುವುದು, ಪ್ರತಿಭಾವಂತ ಗ್ರಾಮೀಣ ವಿದ್ಯಾರ್ಥಿಗಳು, ಶಿಕ್ಷಕರನ್ನು ಗುರುತಿಸಿ ಪುರಸ್ಕರಿಸಿ, ಪ್ರೋತ್ಸಾಹಿಸುವ ಕೆಲಸವನ್ನು ಸಂಸ್ಥೆ ಮಾಡಲಿದೆ ಎಂದು ವಿವರಿಸಿದರು.

ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿ, ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿಯೇ ಸಂಸ್ಥೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

**ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಸ್ಪರ್ಧೆಗೆ ಆಯ್ಕೆ:** ರಾಷ್ಟ್ರೀಯ ಮಟ್ಟದ ಕೋಡಿಂಗ್ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್-2022ರ ಸ್ಪರ್ಧೆ ಇದೇ ಆಗಸ್ಟ್ 25 ಹಾಗೂ 26ರಂದು ಮಧ್ಯಪ್ರದೇಶದ ಇಂದೋರ್‌ನ ಸೇಜ್ ವಿವಿ ಮತ್ತು ಜಾರ್ಖಂಡ್‌ನ ರಾಂಚಿಯ ಬಿರ್ಲಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆಯಲಿದ್ದು, ಬಿಐಇಟಿ ಕಾಲೇಜಿನ ಎರಡು ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಲಿವೆ ಎಂದು ಡಾ.ಪ್ರದೀಪ್ ಎನ್. ಹೇಳಿದರು.

ಗ್ರಾಮ ಪಂಚಾಯ್ತಿಗಳಲ್ಲಿ ಕಟ್ಟಡ ಕಟ್ಟಲು ಬೇಕಾದ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ತಂತ್ರಾಂಶ ತಯಾರಿಕೆ ಹಾಗೂ ಮೀನುಗಳ ಆರೋಗ್ಯದ ವಿಷಯದ ಮೇಲೆ ವಿದ್ಯಾರ್ಥಿಗಳ ತಂಡ ಭಾಗವಹಿಸಲಿದೆ. ತಂಡಗಳ ಮಾರ್ಗದರ್ಶಕರಾದ ಎಂ.ಟಿ. ವಿನಯ್, ಡಾ.ಶ್ರೀನಿವಾಸ ಹಾಗೂ ಎನ್. ರಂಜಿತ್ ಸಹ ತಂಡದ ಜೊತೆ ತೆರಳಲಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಉಪನ್ಯಾಸಕ ಈಶ್ವರಪ್ಪ, ಡಾ.ಪ್ರದೀಪ್ ಎನ್., ಪಬ್ಲಿಸಿಟಿ ಡೀನ್ ಡಾ.ಜಿ.ಪಿ. ದೇಸಾಯಿ ಉಪಸ್ಥಿತರಿದ್ದರು.

# ಶಿಸ್ತು, ಸಂಸ್ಕಾರದಿಂದ ವ್ಯಕ್ತಿತ್ವ ವಿಕಸನ

## ಎ.ವಿ.ಕೆ. ಸ್ವಾಗತ ಸಮಾರಂಭದಲ್ಲಿ ಪ್ರಾಂಶುಪಾಲ ಎ.ಬಿ.ಶಿವನಗೌಡ



ದಾವಣಗೆರೆ, ಆ. 25- ಶಿಸ್ತು, ಸಂಸ್ಕಾರದಿಂದ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ ಎಂದು ಎ.ವಿ.ಕೆ. ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎ.ಬಿ. ಶಿವನಗೌಡ ಹೇಳಿದರು.

ನಗರದ ಎ.ವಿ.ಕೆ. ಕಾಲೇಜಿನಲ್ಲಿ ಪ್ರಥಮ ಪಿಯುಸಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು, ಈ ಅವಧಿಯಲ್ಲಿ ಶ್ರದ್ಧೆ, ಸನ್ನಡತೆ, ಶಿಸ್ತನ್ನು ರೂಢಿಸಿಕೊಳ್ಳಬೇಕು. ನಿರಂತರ ಅಧ್ಯಯನ ಮಾಡುವುದರಿಂದ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯ ಎಂದರು.

ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಮಾತನಾಡಿ, ಪ್ರಸ್ತುತ ವಿಜ್ಞಾನ-ತಂತ್ರಜ್ಞಾನ ಯುಗದಲ್ಲಿ ಜೀವನ ನಡೆಸುತ್ತಿದ್ದೇವೆ. ತಂತ್ರಜ್ಞಾನವನ್ನು ಅಭ್ಯಾಸಕ್ಕೆ ಪೂರಕವಾಗಿ ಮಾತ್ರ ಬಳಸಿ ಹೆಚ್ಚೆಚ್ಚು ಅಧ್ಯಯನ ಮಾಡಿ ಸಾಧಕರಾಗಿ ಎಂದು ಹೇಳಿದರು.

ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿಗಳಾದ ಡಾ. ಎಂ.ಸಿ. ಗೀತಾ, ರವಿ ಬಣಕಾರ್, ಟಿ. ಮಂಜುಳ, ಎಂ.ಪಿ. ಅಶ್ವಿನಿ, ಓ.ಜಿ. ಮಲ್ಲಿಕಾರ್ಜುನಪ್ಪ, ಸರಳ, ಸುನೀತ, ಯಶವಂತ್ ಉಪಸ್ಥಿತರಿದ್ದರು.

# ಎಂಟು ಕಡೆ ವಿ.ವಿ.ಸ್ಥಾಪನೆ

**(1ನೇ ಪುಟದಿಂದ)** ಸ್ಥಾಪನೆಗೆ ಆರ್ಥಿಕ ಮತ್ತು ಯೋಜನಾ ಇಲಾಖೆಗಳು ಒಪ್ಪಿಗೆ ನೀಡಿವೆ. ಇವು ಕಡಿಮೆ ಸ್ಥಳ, ಕಡಿಮೆ ಸಿಬ್ಬಂದಿ ಮತ್ತು ಕಡಿಮೆ ವೆಚ್ಚದೊಂದಿಗೆ ಕಾರ್ಯ ಚಟುವಟಿಕೆ ನಡೆಸಲಿವೆ ಎಂದರು.

# ರಾಜೀ ಇಲ್ಲ: ಸಂಸದ

**(1ನೇ ಪುಟದಿಂದ)** ಉದ್ಯೋಗ ತರಬೇತಿ ನೀಡುತ್ತಿದೆ. ದಾವಣಗೆರೆಯ ಕೇಂದ್ರವು ಚಿತ್ರದುರ್ಗಕ್ಕಿಂತ ಮಾದರಿಯಾಗಲಿ ಎಂದು ಅವರು ಆಶಿಸಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಂ. ಬಸವರಾಜ ನಾಯ್ಕ ಮಾತನಾಡಿ, ನಿರಾಶ್ರಿತರ ಕೇಂದ್ರದಲ್ಲಿ ಹೊಸ ಡಾರ್ಮೆಟರಿ ನಿರ್ಮಿಸಲಾಗುವುದು. ಮಹಿಳೆಯರು ಹಾಗೂ ಗಂಡಸರಿಗೆ ತಲಾ 100 ಬೆಡ್ ನಿರ್ಮಿಸಲಾಗುವುದು. ರಾಜ್ಯದಲ್ಲಿ ಭಿಕ್ಷಾಟನೆ ನಿರ್ಮೂಲನೆಗೆ 10 ಕಡೆ ಭೇಟಿ ನೀಡಿ, ನಿರಾಶ್ರಿತರ ಸಮಸ್ಯೆ ಆಲಿಸಿ, ಅಂತಹವರಿಗೆ ಅನುಕೂಲ ಮಾಡುವ ಬಗ್ಗೆ ಚಿಂತನೆ ನಡೆಸಿದ್ದೇವೆ.

ಶಿವಮೊಗ್ಗ, ದಾವಣಗೆರೆ ಸೇರಿದಂತೆ ಹಲವೆಡೆ ನಿರಾಶ್ರಿತರ ಪರಿಹಾರ ಕೇಂದ್ರದ ಕಾಮಗಾರಿ ಶುರುವಾಗಿದೆ. ಸೆಸ್ ಹಣದ ಜೊತೆಗೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರಕ್ಕೆ ಕೋರಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಂಡಳಿ ಕಾರ್ಯದರ್ಶಿ ಅರ್ಚನಾ, ಸಮಾಜ ಕಲ್ಯಾಣಾಧಿಕಾರಿ ರೇಷ್ಮಾ ಕೌಸರ್, ದಿಶಾ ಸಮಿತಿ ಸದಸ್ಯ ಸಂಗಣ್ಣ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ನಟರಾಜ, ಶಿವಮೂರ್ತಿ, ಪರಮೇಶ ನಾಯ್ಕ, ಸಾಧನಾ ವೃದ್ಧಾಶ್ರಮದ ಅಧ್ಯಕ್ಷೆ ಪುಷ್ಪಲತಾ ಇನ್ನಿತರರಿದ್ದರು.

# ಭಿನ್ನಾಭಿಪ್ರಾಯ ಮರೆತು ಸಮಾಜ ಸಂಘಟಿಸಿ



ಹರಪನಹಳ್ಳಿ, ಆ.25- ಸಮಾಜದ ಸಂಘಟನೆಗೆ ಭಿನ್ನಾಭಿಪ್ರಾಯ ಮರೆತು ಸಮಾಜದ ಒಳಿತಿಗಾಗಿ ಸಂಘಟನೆ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮತ್ತಿಹಳ್ಳಿ ಶಿವಣ್ಣ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ತಾಲ್ಲೂಕು ಮಾದಿಗ ಮಹಾಸಭಾದಿಂದ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಮೊದಲನೇ ಶ್ರೇಣಿಯಲ್ಲಿ ಅಧಿಕ ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಕಾರ್ಯಕ್ರಮ ಆಯೋಜನೆ ಮಾಡುವ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸಮಾಜವನ್ನು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಪುನರ್ ಸಂಘಟನೆ ಮಾಡುವ ಅವಶ್ಯಕತೆಯಿದ್ದು, ಅಂಬೇಡ್ಕರ ಅವರ ತತ್ವ, ಸಿದ್ಧಾಂತ ಹೋರಾಟದ ಮನೋಭಾವವನ್ನು ಅಳವಡಿಸಿಕೊಂಡು ಹಿರಿಯರ ಮಾರ್ಗದರ್ಶನದಲ್ಲಿ ಯುವ ಸಮೂಹ ಸಮಾಜದ ಒಳಿತಿಗೆ ಶ್ರಮಿಸಬೇಕೆಂದರು.

**ಹರಪನಹಳ್ಳಿ: ಜಿ.ಪಂ. ಮಾಜಿ ಉಪಾಧ್ಯಕ್ಷ ಮತ್ತಿಹಳ್ಳಿ ಶಿವಣ್ಣ**

ತಾ. ಪಂ. ಮಾಜಿ ಸದಸ್ಯ ಹುಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಪ್ಪ ಮಾತನಾಡಿ, ಸರ್ಕಾರದ ಸೌಲಭ್ಯ ಪಡೆದು ಇತರೆ ಸಮಾಜದೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಎಲ್ಲರು ಸಮಾಜದ ಮುಖ್ಯ ವಾಹಿನಿಗೆ ಬರಬೇಕೆಂದರು.

ತಾಲ್ಲೂಕಿನ ಮಾದಿಗ ಸಮಾಜದ ಮುಖಂಡ ಕಣಿವಿಹಳ್ಳಿ ಮಂಜುನಾಥ್ ಮಾತನಾಡಿ, ಮೂಲ ದಲಿತ ಸಮಾಜದ ಜನಾಂಗ ಸರ್ಕಾರದ ಸೌಲಭ್ಯದಿಂದ ವಂಚಿತವಾಗುತ್ತಿದೆ. ಪ್ರತಿಯೊಬ್ಬರು ಜಾಗೃತರಾಗಿ ಸಂಘಟಿತರಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನು ಆಸ್ತಿಯನ್ನಾಗಿ ರೂಪಿಸಬೇಕೆಂದರು.

ಮುಖಂಡರಾದ ಕೊಂಗನ ಹೊಸೂರು ಶಿವಣ್ಣ, ಮೈದೂರು ರಾಮಣ್ಣ, ಅಂಬೇಡ್ಕರ್ ಸಂಘದ ಪ್ರಧಾನ ಕಾರ್ಯದರ್ಶಿ ಓ.ಮಹಾಂತೇಶ್, ಶೃಂಗಾರತೋಟ ನಿಂಗರಾಜ್, ಪುಣಬಗಟ್ಟಿ ನಿಂಗಪ್ಪ, ಕಬ್ಬಳ್ಳಿ ಪರಸಪ್ಪ, ಕೆ.ಡಿ.ಅಂಜಿನಪ್ಪ, ಮಜ್ಜಿಗೇರಿ ಭೀಮಪ್ಪ, ನಂದಿಬೇವೂರು ಚಾರೇಪ್ಪ, ಮಾಳಗಿ ಮಂಜುನಾಥ, ಬಾಗಳಿ ಪರಸಪ್ಪ, ಚಿಗಟೇರಿ ಪರಶುರಾಮ್, ಹಲವಾಗಲು ಮಾರುತಿ, ಬಿ.ರಮೇಶ್, ಬಿ.ಚಂದ್ರಪ್ಪ ಪಕ್ಕೀರಪ್ಪ, ಪೊಲೀಸ್ ಕೆಂಚಪ್ಪ, ಗುಂಡಗತ್ತಿ ಹಾಲೇಶಪ್ಪ, ಕಂಚಿಕೇರಿ ಕೆಂಚಪ್ಪ, ಬಾಗಳಿ ಸುಭಾಷ್, ರವಿ, ನಿಂಗಪ್ಪ, ಪ್ರಭು ವಕೀಲರು, ಅಣಜಿಗೇರಿ ಕೊಟ್ರೇಶಿ ಸೇರಿದಂತೆ ಇತರರು ಇದ್ದರು.

# ಸರ್ಕಾರಗಳ ಆಡಳಿತ ವೈಫಲ್ಯ ತಿಳಿಸುವುದೇ ಜನಾಕ್ರೋಶ ಪಾದಯಾತ್ರೆ ಅಭಿಯಾನದ ಉದ್ದೇಶ

## ಕೆಪಿಸಿಸಿ ಕಿಸಾನ್ ಸೆಲ್‌ನ ಅಧ್ಯಕ್ಷ ಸಚಿನ್ ಮಿಗಾ



ಹರಪನಹಳ್ಳಿ, ಆ. 25- ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳ ಆಡಳಿತ ವೈಫಲ್ಯಗಳನ್ನು ಜನರಿಗೆ ತಿಳಿಸುವುದೇ ಜನಾಕ್ರೋಶ ಪಾದಯಾತ್ರೆ ಅಭಿಯಾನದ ಉದ್ದೇಶ ಎಂದು ಕೆಪಿಸಿಸಿ ಕಿಸಾನ್ ಸೆಲ್‌ನ ಅಧ್ಯಕ್ಷ ಸಚಿನ್ ಮಿಗಾ ತಿಳಿಸಿದರು.

ತಾಲ್ಲೂಕಿನ ನಂದಿಬೇವೂರು ಗ್ರಾಮದಲ್ಲಿ ಕಾಂಗ್ರೆಸ್ ವತಿಯಿಂದ ಕೆಪಿಸಿಸಿ ಓಬಿಸಿ ಘಟಕದ ಉಪಾಧ್ಯಕ್ಷ ಅಂಬಾಡಿ ನಾಗರಾಜ್ ನೇತೃತ್ವದಲ್ಲಿ ಆಯೋಜಿಸಿದ್ದ ಜನಾಕ್ರೋಶ ಪಾದಯಾತ್ರೆ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು

ಪ್ರಧಾನಿ ನರೇಂದ್ರ ಮೋದಿ ಅವರ ದುರಾಡಳಿತ, ರಾಜ್ಯ ಸರ್ಕಾರದ ಶೇ. 40 ರ ಕಮಿಷನ್ ಆರೋಪ, ಸಿದ್ಧರಾಮಯ್ಯಗೆ ಮೊಟ್ಟೆ ಎಸೆದ ಪ್ರಕರಣ ಹೀಗೆ ಬಿಜೆಪಿ ಸರ್ಕಾರದ ಜನ ವಿರೋಧಿ ಕ್ರಮಗಳನ್ನು ಪ್ರತಿ ಮನೆ ಮನೆಗೂ ಮುಟ್ಟಿಸಬೇಕಾಗಿದೆ ಎಂದರು.

ಹಣದ ಮೇಲೆ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಲಜ್ಜಗೆಟ್ಟ ಬಿಜೆಪಿ ಸರ್ಕಾರಗಳು ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿವೆ. ಆದ್ದರಿಂದ ಬಿಜೆಪಿಯವರ ತಂತ್ರಗಾರಿಕೆಗೆ ಮರುಳಾಗಬೇಡಿ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಕೆಪಿಸಿಸಿ ಓಬಿಸಿ ಘಟಕದ ಉಪಾಧ್ಯಕ್ಷ ಅಂಬಾಡಿ ನಾಗರಾಜ್ ಮಾತನಾಡಿ, ಆಡಳಿತ ಪಕ್ಷದ ವೈಫಲ್ಯವನ್ನು ಜನರ ಮುಂದಿಡುವ ಕೆಲಸ ನನ್ನದಾಗಿದೆ. ಹರಪನಹಳ್ಳಿ ಕ್ಷೇತ್ರದಲ್ಲಿ ಟೆಂಡರ್ ಆಗಿ 50 ತಿಂಗಳು ಕಳೆದರೂ ಕೆರೆಗಳಿಗೆ ನದಿ ನೀರು ತುಂಬಿಸುವ ಯೋಜನೆ ಪೂರ್ಣಗೊಂಡಿಲ್ಲ ಎಂದು ಕಿಡಿಕಾರಿದರು.

ಗರ್ಭಗುಡಿ ಬ್ರಿಡ್ಜ್ ಕಂ ಬ್ಯಾರೇಜ್ ಯೋಜನೆ ಸ್ಥಗಿತಗೊಂಡಿದೆ. ಹೀಗೆ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳು ನೆನೆಗುದಿಗೆ ಬಿದ್ದಿವೆ ಎಂದು ಹೇಳಿದರು.

ಬಿಜೆಪಿಯವರು ಭ್ರಷ್ಟಾಚಾರ ಉಳಿಸಿ, ರಕ್ಷಿಸಿ ಎಂಬ ವಾಕ್ಯದಡಿ ನಡೆಯುತ್ತಿದ್ದಾರೆ. 182 ಹಳ್ಳಿಗಳಲ್ಲಿ ನಮ್ಮ ಪಾದಯಾತ್ರೆ ಜರುಗಲಿದೆ. ಪಕ್ಷದ ಕಾರ್ಯಕರ್ತರು ಯಾರೊಬ್ಬರ ಜೊತೆ ಗುರುತಿಸಿಕೊಳ್ಳದೇ ಪಕ್ಷದ ಜೊತೆ ಗುರುತಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ಚಂದ್ರ ಮಾತನಾಡಿ, ಹೋರಾಟ ಹನಿ ಹನಿಯಾಗಿ ಆರಂಭವಾಗಿ ನಂತರ ಸಾಗರವಾಗುತ್ತದೆ. ಸರ್ಕಾರಗಳ ವೈಫಲ್ಯಗಳನ್ನು ಜನರಿಗೆ ತಲುಪಿಸಬೇಕಾಗಿದೆ. ಆ ಕೆಲಸ ಈ ಪಾದಯಾತ್ರೆಯಿಂದ ನಡೆಯುತ್ತದೆ ಎಂದರು.

ಮುಖಂಡರಾದ ಹಲಗೇರಿ ಮಂಜಪ್ಪ, ಕೋಡಿಹಳ್ಳಿ ಗುರುಬಸವರಾಜ, ಕಣವಿಹಳ್ಳಿ ಮಂಜುನಾಥ ಮಾತನಾಡಿದರು. ರಾಗಿಮಸಲವಾಡದ ನರೇಶ, ನೇಮನಾಯ್ಕ, ದಾದಾಪೀರ್ ಮಕರಬ್ಬಿ ಮತ್ತಿತರರಿದ್ದರು.

# ಸ್ತ್ರೀಯರು ನಾಯಕತ್ವಕ್ಕೂ ಮುಂದೆ ಬರಬೇಕು

## ಅಕ್ಕಮಹಾದೇವಿ ಬಾಲಕಿಯರ ಪ್ರೌಢಶಾಲಾ ವಿದ್ಯಾರ್ಥಿ ಸಂಘ ಉದ್ಘಾಟನೆಯಲ್ಲಿ ಎಚ್.ಬಿ. ಮಂಜುನಾಥ್ ಆಶಯ



ದಾವಣಗೆರೆ, ಆ.25- ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಸ್ತ್ರೀಯರು ಹೆಚ್ಚು ಸಮರ್ಥರಾಗಿದ್ದು, ಸ್ತ್ರೀಯರು ಶಿಕ್ಷಣ ಪಡೆದರೆ ಸಾಲದು, ನಾಯಕತ್ವಕ್ಕೂ ಹೆಚ್ಚಾಗಿ ಬರಬೇಕು ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಕರೆಕೊಟ್ಟರು.

ನಗರದ ಶ್ರೀ ಜಗದ್ಗುರು ಜಯ ವಿಭವ ವಿದ್ಯಾಸಂಸ್ಥೆಯ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಪ್ರಾಚೀನ ಭಾರತದಲ್ಲಿ ಸ್ತ್ರೀಯರ ನಾಯಕತ್ವಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು ಎನ್ನುವುದು ನಮ್ಮ ಪುರಾಣ ಇತಿಹಾಸಗಳಿಂದ ತಿಳಿದುಬರುತ್ತದೆ. ಆದರೆ ಮಧ್ಯಕಾಲದಲ್ಲಿ ಅದೇಕೋ ಸ್ತ್ರೀಯರನ್ನು ಗೃಹಕೃತ್ಯಕ್ಕಷ್ಟೇ ಸೀಮಿತಗೊಳಿಸಲಾಗಿತ್ತು. ಆದರೆ ಈಗ ಅವಕಾಶವೊದಗಿದಲ್ಲೆಲ್ಲ ಸ್ತ್ರೀಯರು ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದು, ಭವಿಷ್ಯದಲ್ಲಿ ನಾಯಕತ್ವದ ಜವಾಬ್ದಾರಿ ಅವರಿಗೆ ಹೆಚ್ಚಾಗಿ ಒದಗಲಿದ್ದು ವಿದ್ಯಾರ್ಥಿನಿಯರು ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳ ಮುಖಾಂತರ ನಾಯಕತ್ವದ ಗುಣವನ್ನು ವೃದ್ಧಿಸಿಕೊಳ್ಳಲು ವಿದ್ಯಾರ್ಥಿ ಸಂಘವನ್ನು ಬಳಸಿಕೊಳ್ಳಬೇಕು ಎಂದು ಮಂಜುನಾಥ ಕರೆಕೊಟ್ಟರು.

ವಿಶೇಷ ಆಹ್ವಾನಿತರಾಗಿ ವಿದ್ಯಾಸಂಸ್ಥೆಯ ಸಹ ಕಾರ್ಯದರ್ಶಿ ಶ್ರೀಮತಿ ಸೌಮ್ಯ ಬಸವರಾಜ್ ಮಾತನಾಡಿ, ವಿದ್ಯಾರ್ಥಿನಿಯರು ತಾವು ಶಿಕ್ಷಣ ಪಡೆದ ಶಾಲೆ ಹಾಗೂ ಶಿಕ್ಷಕರ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸಿದ ಅನೇಕ ನಿದರ್ಶನಗಳನ್ನು ಸ್ವಾರಸ್ಯಕರವಾಗಿ ವಿವರಿಸಿದರು.

ಬಹುಮಾನ ವಿತರಿಸಿ ಮಾತನಾಡಿದ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ ಎಸ್.ಚಿಗಟೇರಿಯವರು, ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗದಂತೆ ಉತ್ತಮ ಶಿಕ್ಷಣ ನೀಡುತ್ತಿರುವ ಸಂಸ್ಥೆಯ ಸ್ಥಾಪಕರುಗಳನ್ನು ಸ್ಮರಿಸಿದರು.

ಮುಖ್ಯೋಪಾಧ್ಯಾಯ ಜಿ.ಸುರೇಶ್ ನಾಯ್ಕರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ವಾಗ್ದೇವಿ, ಎಂ.ಟಿ. ಮಳಗಿ, ಶ್ರೀಮತಿ ಸುಮಂಗಲಮ್ಮ ಎಸ್. ಚಿಗಟೇರಿ, ಗುರುಬಸಮ್ಮ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯ ಹೆಚ್. ನಿಂಗಪ್ಪ, ಮುರುಘರಾಜೇಂದ್ರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಸ್. ನಾಗರಾಜ್, ಗುರುಬಸಮ್ಮ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಂ.ಎಸ್. ವೀರಮ್ಮ ಮತ್ತಿತರರು ಉಪಸ್ಥಿತರಿದ್ದರು.

ಪ್ರಾರ್ಥನೆಯನ್ನು ನಿಸರ್ಗ ಹಾಡಿದರೆ ಕಾರ್ಯಕ್ರಮವನ್ನು ಸಹಶಿಕ್ಷಕ ಕೆ. ಆರ್.ರುದ್ರಪ್ಪ ನಿರೂಪಿಸಿದರು. ಸಹಶಿಕ್ಷಕ ಬಿ.ಕೆ. ಹನುಮಂತಪ್ಪ ಸ್ವಾಗತ ಕೋರಿದರು. ಹರ್ಷ ಎನ್. ವರದಿ ವಾಚನ ಮಾಡಿದರು.

ಶಾಲೆಯ ಶಿಕ್ಷಕಿಯಾಗಿದ್ದು ದೈವಾಧೀನರಾದ ರುದ್ರಾಂಬಿಕಾ ನೆನಪಿನಲ್ಲಿ ಅವರ ತಾಯಿ ಸುಮಿತ್ರ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ನೆನಪಿನ ಕಾಣಿಕೆಗಳನ್ನು ನೀಡಿದರು. ಸಹಶಿಕ್ಷಕ ಸುರೇಶ್ ಯು.ಆರ್. ವಂದನೆ ಸಲ್ಲಿಸಿದರು.

ಅರವತ್ತನೇ ವರ್ಷದ ಸಂಭ್ರಮದಲ್ಲಿರುವ ವಿದ್ಯಾಸಂಸ್ಥೆಯ ಸ್ಥಾಪಕ ಕೀರ್ತಿಶೇಷ ವೀರಭದ್ರಪ್ಪ ಎಂ. ಚಿಗಟೇರಿ ಅವರ ಪುತ್ಥಳಿಗೆ ಎಚ್.ಬಿ. ಮಂಜುನಾಥ್ ಪುಷ್ಪಗೌರವ ಸಲ್ಲಿಸಿದರು.

# ಸಾವಯವ ರೂಪದಲ್ಲಿ ಬೆಳೆದ ತರಕಾರಿಗಳು ಪೌಷ್ಟಿಕತೆಯಿಂದ ಕೂಡಿದ್ದು, ಉತ್ತಮ ಆರೋಗ್ಯ

## ನಿಟ್ಟೂರಿನ ಕಾರ್ಯಕ್ರಮದಲ್ಲಿ ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ



ದಾವಣಗೆರೆ,ಆ.25- ಕೈ ತೋಟದಲ್ಲಿ ಸಾವಯವ ರೂಪದಲ್ಲಿ ಬೆಳೆದ ತರಕಾರಿಗಳು ಪೌಷ್ಟಿಕತೆಯಿಂದ ಕೂಡಿದ್ದು, ದೇಹಕ್ಕೆ ಉತ್ತಮ ಆರೋಗ್ಯ ನೀಡಲು ಸಹಾಯವಾಗುತ್ತವೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ತಜ್ಞ ಬಸವನಗೌಡ ಎಂ.ಜಿ ತಿಳಿಸಿದರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಮತ್ತು ನಿಟ್ಟೂರು ತರಳಬಾಳು ಅಮೃತ ತೋಟಗಾರಿಕೆ ರೈತ ಉತ್ಪಾದಕ ಕಂಪನಿ ಇವರ ಸಹಯೋಗದೊಂದಿಗೆ ನಿಟ್ಟೂರಿನಲ್ಲಿ ಪೌಷ್ಟಿಕಾಂಶದ ಭದ್ರತೆಗಾಗಿ ಪೌಷ್ಟಿಕ ಕೈತೋಟ ಎಂಬ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು.

ಪ್ರಸ್ತುತ ಆಹಾರ ಪದ್ಧತಿಯಲ್ಲಿ ರಾಸಾಯನಿಕ ಮುಕ್ತ ತರಕಾರಿಗಳು, ಬೇಳೆ ಕಾಳುಗಳ ಬಳಕೆ ಹಾಗೂ ಸಾವಯವ ಅಂಶಗಳಿಂದ ಬೆಳೆದ ಪದಾರ್ಥಗಳು ನಮ್ಮ ದೇಹಕ್ಕೆ ಪೌಷ್ಟಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತವೆ. ಕೈತೋಟದಲ್ಲಿ ಹಣ್ಣು, ತರಕಾರಿ, ಹೂವು, ಔಷಧೀಯ ಸಸ್ಯಗಳನ್ನು ಬೆಳೆಸುವುದು ಉತ್ತಮ ಹವ್ಯಾಸವೆಂದು ತಿಳಿಸಿದರು

ಕೇಂದ್ರದ ಗೃಹ ವಿಜ್ಞಾನಿ ಡಾ. ಸುಪ್ರಿಯಾ ಪಿ. ಪಾಟೀಲ್ ಅವರು ಮಾತನಾಡಿ, ಹೆಚ್ಚಿನ ಮಹಿಳೆಯರಲ್ಲಿ ರಕ್ತಹೀನತೆ ಕಾಡುತ್ತಿದ್ದು, ಅಪೌಷ್ಟಿಕತೆಗೆ ಒಳಗಾಗಿದ್ದಾರೆ. ಇವರು ತಮ್ಮ ಮನೆ ಸುತ್ತ ಮುತ್ತಲಿನ ಜಾಗದಲ್ಲಿ ಕಬ್ಬಿಣಾಂಶ ಹೆಚ್ಚಿರುವ ಸೊಪ್ಪು ಮತ್ತು ಇತರೆ ತರಕಾರಿಗಳನ್ನು ಬೆಳೆದು ಸೇವಿಸುವುದರಿಂದ ರಕ್ತಹೀನತೆಯನ್ನು ತಡೆಗಟ್ಟಬಹುದು ಎಂದು ಮಾಹಿತಿ ನೀಡಿದರು. ಈ ಪೌಷ್ಟಿಕ ಕೈತೋಟವನ್ನು ನಾವು ಅಳವಡಿಸಿಕೊಳ್ಳುವುದರಿಂದ ನಾವು ಒಳ್ಳೆಯ ಆರೋಗ್ಯ ವನ್ನು ಗಳಿಸುವುದರ ಜೊತೆಗೆ ಹಣವನ್ನು ಉಳಿತಾಯ ಮಾಡಬಹುದೆಂದರು.

ಇದೇ ವೇಳೆ ಪೌಷ್ಟಿಕ ಕೈತೋಟಕ್ಕೆ ಬೇಕಾಗಿರುವ ಬೀಜಗಳನ್ನು 30 ರೈತ ಮಹಿಳೆಯರಿಗೆ ವಿತರಿಸಲಾಯಿತು. ನಿಟ್ಟೂರು ತರಳಬಾಳು ಅಮೃತ ತೋಟಗಾರಿಕಾ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಇಟಗಿ ಶಿವಣ್ಣ, ನಿರ್ದೇಶಕಿ ಶ್ರೀಮತಿ ಸರೋಜ ಪಾಟೀಲ್ ಭಾಗವಹಿಸಿದ್ದರು.

# ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಹೂವಿನಮಡು ಪ್ರೌಢಶಾಲೆ ಪ್ರಥಮ



ದಾವಣಗೆರೆ, ಆ.25- ದಾವಣಗೆರೆ ದಕ್ಷಿಣ ವಲಯ ಎ ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಹೂವಿನಮಡು ಸರ್ಕಾರಿ ಪ್ರೌಢಶಾಲಾ ಬಾಲಕಿಯರ ಮತ್ತು ಬಾಲಕರ ಎರಡೂ ವಿಭಾಗದ ಬಾಲ್ ಬ್ಯಾಡ್ಮಿಂಟನ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಬಾಲಕಿಯರ ವಿಭಾಗದಲ್ಲಿ ಕು. ಸೃಷ್ಟಿ (ನಾಯಕಿ), ಬಿಂದು, ಸ್ನೇಹ, ಶ್ವೇತ, ಐಶ್ವರ್ಯ, ಬಾಲಕರ ವಿಭಾಗದಲ್ಲಿ ಕು. ಗೋಪಿ (ನಾಯಕ), ಪುನೀತ್, ಪ್ರಜ್ವಲ್ ಮಂಜುನಾಥ್, ನರೇಂದ್ರ ಇವರುಗಳು ಅತ್ಯುತ್ತಮ ಕ್ರೀಡಾ ಪ್ರದರ್ಶನ ತೋರಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ದೈಹಿಕ ಶಿಕ್ಷಕ ರವಿಕುಮಾರ್ ಎನ್., ತಂಡದ ವ್ಯವಸ್ಥಾಪಕ ಮಂಜುನಾಥ ಕೆ.ಎಂ. ಅವರನ್ನು ಮತ್ತು ವಿಜೇತರಾದ ಮಕ್ಕಳನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗರಾಜ್ ಅಭಿನಂದಿಸಿದ್ದಾರೆ.

# ಇಂದು ನೂತನ ಸ್ವಾಮಿಗಳ ನೇಮಕ

ಚಿತ್ರದುರ್ಗ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಇಂದು ಬೆಳಿಗ್ಗೆ 8ಕ್ಕೆ ಶ್ರೀ ಜಗದ್ಗುರು ಮುರುಘರಾಜೇಂದ್ರ ಶಾಖಾ ಮಠ ಬೆಂಗಳೂರು ಶ್ರೀ ಕೊಳದ ಮಠಕ್ಕೆ ನೂತನ ಸ್ವಾಮಿಗಳ ನೇಮಕ ಸಮಾರಂಭ ನಡೆಯಲಿದೆ. ಶ್ರೀ ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷತೆ ವಹಿಸಲಿದ್ದಾರೆ. ಚನ್ನಗಿರಿ ಶ್ರೀ ಹಾಲಸ್ವಾಮಿ ವಿರಕ್ತಮಠದ ಡಾ. ಬಸವ ಜಯಚಂದ್ರ ಸ್ವಾಮಿಗಳು ಕೊಳದ ಮಠಕ್ಕೆ ನೂತನ ಸ್ವಾಮಿಗಳಾಗಲಿದ್ದಾರೆ.

# ಎಸ್ಸೆಸ್ಸೆಂ ಹುಟ್ಟುಹಬ್ಬದ ಪ್ರಯುಕ್ತ ಕನ್ನಡ, ಹಿಂದಿ ಕರೋಕೆ ಗಾಯನ ಸ್ಪರ್ಧೆ



ದಾವಣಗೆರೆ, ಆ. 25- ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿ ಬಳಗ, ಕುಹೂ ಕುಹೂ ಕರೋಕೆ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಕನ್ನಡ ಮತ್ತು ಹಿಂದಿ ಕರೋಕೆ ಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು, ವಿಜೇತರಿಗೆ ಪವರ್ ಸ್ಟಾರ್ ದಿ. ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಬಳಗದ ನಿರ್ದೇಶಕ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಉದಯೋನ್ಮುಖ ಗಾಯಕರಿಗೆ ತಮ್ಮ ಪ್ರತಿಭೆ ಅನಾವರಣಗೊಳಿಸಿಕೊಳ್ಳಲು ಈ ಸ್ಪರ್ಧೆ ಸೂಕ್ತ ವೇದಿಕೆಯಾಗಲಿದೆ. ಜನಪ್ರಿಯ ಕನ್ನಡ, ಹಿಂದಿ ಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆಗಳನ್ನು ಕರೋಕೆ ಶೈಲಿಯಲ್ಲಿ ಹಾಡಬಹುದು ಎಂದರು.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಜನ್ಮ ದಿನದ ಅಂಗವಾಗಿ ನಟ ದರ್ಶನ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಉಪಸ್ಥಿತಿಯಲ್ಲಿ ಈ ಸ್ಪರ್ಧಾ ಕಾರ್ಯಕ್ರಮ ಏರ್ಪಾಡಾಗಿದ್ದು, ಒಂದು ಸಿನಿಮಾ ಗೀತೆ ಅಥವಾ ಇನ್ನಾವುದೇ ಗೀತೆಗಳನ್ನಾಡಲು ಬಹಳಷ್ಟು ಸಂಗೀತ ಉಪಕರಣಗಳು ಮತ್ತು ತಾಂತ್ರಿಕ ವ್ಯವಸ್ಥೆಗಳಿದ್ದರೆ ಮಾತ್ರ ಯಶಸ್ವಿಯಾಗಿ ಹಾಡಬಹುದು. ಆದರೆ ಪ್ರಸ್ತುತ ದಿನಗಳಲ್ಲಿ ಒಬ್ಬ ಕಷ್ಟಸಾಧ್ಯ. ಹಾಗಾಗಿ ಪ್ರಪಂಚದಾದ್ಯಂತ ಸುಲಭ ಮಾರ್ಗವಾದ ಆಧುನಿಕ ತಂತ್ರಜ್ಞಾನದ ಕರೋಕೆ ಶೈಲಿಗೆ ಒಳಪಡಿಸಿಕೊಳ್ಳುವುದರಿಂದ ಕೇಳುಗರಿಗೆ ಒಬ್ಬ ಸಾಮಾನ್ಯ ಗಾಯಕನೂ ಅದ್ಭುತ ಗಾಯಕನಂತೆ ಗೋಚರಿಸುತ್ತಾನೆ ಎಂದು ಹೇಳಿದರು.

ನಿರ್ದೇಶಕ ಎ. ನಾಗರಾಜ್ ಮಾತನಾಡಿ, ಮೊದಲನೇ ಸುತ್ತಿನ ಧ್ವನಿ ಪರೀಕ್ಷೆ ಸೆಪ್ಟೆಂಬರ್ 10 ರಂದು ನಗರದ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ಎರಡನೇ ಸುತ್ತಿನ ಧ್ವನಿ ಪರೀಕ್ಷೆ ಸೆ. 11 ರಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಕುವೆಂಪು ಕನ್ನಡ ಭವನದಲ್ಲಿ , ಮೂರನೆಯ ಸುತ್ತಿನ ಧ್ವನಿ ಪರೀಕ್ಷೆ ಸೆ. 17 ರಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಕುವೆಂಪು ಕನ್ನಡ ಭವನದಲ್ಲಿ ಹಾಗೂ ನಾಲ್ಕನೆ ಸುತ್ತಿನ ಧ್ವನಿ ಪರೀಕ್ಷೆ ಸೆ. 18 ರಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಹರಿಹರ ಗುರುಭವನದಲ್ಲಿ ನಡೆಸಲಾಗುವುದು.

ಸೆ. 22 ರಂದು ಸಂಜೆ 4 ಗಂಟೆಗೆ ಅಂತಿಮ ಸುತ್ತಿನ ಕಾರ್ಯಕ್ರಮ ನಡೆಯಲಿದೆ. ಪ್ರವೇಶ ಪತ್ರಗಳು ಸ್ಟೆಟ್ ಪಾರ್ಕ್ ಫಿಟ್ನೆಸ್ ನಲ್ಲಿ ದೊರೆಯಲಿದೆ. ಒಂದು ಕನ್ನಡ ಕರೋಕೆ ಸಿಡಿ ಉಚಿತವಾಗಿ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸುರೇಶ ಬಾಬು- 94484-36388, 8660143887ಗೆ ಸಂಪರ್ಕಿಸಬಹುದು. 8 ವರ್ಷದೊಳಗೆ, 16 ವರ್ಷದೊಳಗೆ, 25 ವರ್ಷದೊಳಗೆ, 25 ವರ್ಷ ಮೇಲ್ಪಟ್ಟವರು ಭಾಗವಹಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕರಾದ ಗಡಿಗುಡಾಳ್ ಮಂಜುನಾಥ, ಸಂಚಾಲಕ ಸುರೇಶಬಾಬು ಉಪಸ್ಥಿತರಿದ್ದರು.

# ಎನ್.ಇ.ಪಿ. ಪ್ರಾಯೋಗಿಕವಾಗಿ ಜಾರಿ ನವೆಂಬರ್‌ನಿಂದ ಮಕ್ಕಳಿಗೆ ಕಲಿಕೆ

ಬೆಂಗಳೂರು, ಆ. 25 – ನೂತನ ಶಿಕ್ಷಣ ನೀತಿಯ ಅನ್ವಯ, ಮೂರು ವರ್ಷದಿಂದಲೇ ಮಗುವಿನ ಕಲಿಕೆಯನ್ನು ಆರಂಭಿಸುವ ಪ್ರಕ್ರಿಯೆಗೆ ರಾಜ್ಯ ಸರ್ಕಾರ ನವೆಂಬರ್‌ನಿಂದ ಪ್ರಾಯೋಗಿಕವಾಗಿ ಚಾಲನೆ ನೀಡಲಿದೆ. 20 ಸಾವಿರ ಅಂಗನವಾಡಿ ಹಾಗೂ ಶಾಲೆಗಳಲ್ಲಿ ಮೂರು ವರ್ಷದ ಮಕ್ಕಳಿಗೆ ಪ್ರವೇಶ ದೊರೆಯಲಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಅವರು ಈ ವಿಷಯ ತಿಳಿಸಿದ್ದಾರೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸೆಪ್ಟೆಂಬರ್ ವೇಳೆಗೆ ಹೊರ ಬೀಳಲಿದೆ. ಅಕ್ಟೋಬರ್‌ನಲ್ಲಿ ರಾಜ್ಯ ಪಠ್ಯಕ್ರಮ ಚೌಕಟ್ಟು ರೂಪಿಸಲಾಗುವುದು. ನವೆಂಬರ್‌ನಿಂದ ಮೂರು ವರ್ಷ ಮೀರಿದ ಮಕ್ಕಳಿಗೆ ಕಲಿಕೆಗೆ ಅವಕಾಶ ನೀಡುವ ಪದ್ಧತಿ ಜಾರಿಗೆ ಬರಲಿದೆ ಎಂದವರು ಹೇಳಿದ್ದಾರೆ. ಎಲ್ಲವೂ ಯೋಜನೆಯಂತೆ ಕೈಗೂಡಿದರೆ 20 ಸಾವಿರ ಅಂಗನವಾಡಿಗಳು ಹಾಗೂ ಶಾಲೆಗಳಲ್ಲಿ ಈ ಯೋಜನೆ ಪ್ರಾಯೋಗಿಕವಾಗಿ ಜಾರಿಗೆ ಬರಲಿದೆ.

# ಅವಧಿಗೆ ಮೊದಲೇ ಮುಂಗಾರು ಮಾರುತಗಳು ವಾಪಸ್

ನವದೆಹಲಿ, ಆ. 25 – ಸೆಪ್ಟೆಂಬರ್ ಮೊದಲ ವಾರದಿಂದಲೇ ಮುಂಗಾರು ಮಾರುತಗಳು ಹಿಂದೆ ಸರಿಯಲು ಆರಂಭಿಸಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸಾಮಾನ್ಯವಾಗಿ ಸೆಪ್ಟೆಂಬರ್ ಮೂರನೇ ವಾರದಲ್ಲಿ ಮುಂಗಾರು ಮಾರುತಗಳು ಹಿಂದೆ ಸರಿಯುತ್ತವೆ.

ಸೆಪ್ಟೆಂಬರ್ 1ರಿಂದ ಮುಂಗಾರು ಮಾರುತಗಳು ಹಿಂದೆ ಸರಿಯಲು ವಾತಾವರಣ ಅನುಕೂಲಕರವಾಗಲಿದೆ ಎಂದು ಹವಾಮಾನ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದುವರೆಗೂ ದೇಶದಲ್ಲಿ ಸುರಿದಿರುವ ಮುಂಗಾರಿನ ಪ್ರಮಾಣ ವಾಡಿಕೆಗಿಂತ ಶೇ.9ರಷ್ಟು ಹೆಚ್ಚಾಗಿದೆ. ಆದರೆ, ಉತ್ತರ ಪ್ರದೇಶ, ಬಿಹಾರ ಹಾಗೂ ಮಣಿಪುರಗಳಲ್ಲಿ ಮಳೆಯ ಪ್ರಮಾಣ ವಾಡಿಕೆಗಿಂತ ಶೇ.40ರಷ್ಟು ಕಡಿಮೆ ಇದೆ. ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಮಧ್ಯ ಪ್ರದೇಶ, ತೆಲಂಗಾಣ ಹಾಗೂ ಛತ್ತೀಸ್‌ಘಡಗಳಲ್ಲಿ ಭತ್ತದ ಬಿತ್ತನೆ ಕಡಿಮೆಯಾಗಿದೆ. ಬೇಳೆಗಳ ಬಿತ್ತನೆಯೂ ಕಡಿಮೆಯಾಗಿದೆ.

# ಜಾರ್ಖಂಡ್ ಮುಖ್ಯಮಂತ್ರಿ ಅನರ್ಹತೆಗೆ ಆಯೋಗದ ಶಿಫಾರಸ್ಸು

ರಾಂಚಿ, ಆ. 25 – ಚುನಾವಣಾ ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸುವಂತೆ ಚುನಾವಣಾ ಆಯೋಗವು ರಾಜ್ಯಪಾಲ ರಮೇಶ್ ಬೈಸ್ ಅವರಿಗೆ ಶಿಫಾರಸ್ಸು ಮಾಡಿದೆ ಎಂದು ರಾಜಭವನದ ಮೂಲಗಳು ತಿಳಿಸಿವೆ. ಆದರೆ, ಈ ಬಗ್ಗೆ ರಾಜಭವನ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಸೋರೇನ್ ಅವರು ತಮ್ಮ ಗಣಿ ಗುತ್ತಿಗೆಯನ್ನು ತಾವೇ ವಿಸ್ತರಿಸಿಕೊಳ್ಳುವ ಮೂಲಕ ಚುನಾವಣಾ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅವರನ್ನು ಅನರ್ಹಗೊಳಿಸಬೇಕು ಎಂದು ಚುನಾವಣಾ ಆಯೋಗ ಶಿಫಾರಸ್ಸು ಮಾಡಿದೆ ಎನ್ನಲಾಗಿದೆ.

# ಉದ್ಯೋಗಕ್ಕಾಗಿ ಹೆಬ್ಬೆರಳ ಚರ್ಮ ಸುಲಿದು ಸ್ನೇಹಿತನಿಗೆ ಅಂಟಿಸಿದ ಅಭ್ಯರ್ಥಿ

ವಡೋದರ, ಆ. 25 – ರೈಲ್ವೆಯಲ್ಲಿ ಉದ್ಯೋಗ ಪಡೆಯುವ ಸಲುವಾಗಿ ವಂಚನೆಯ ಮಾರ್ಗ ಹಿಡಿದ ವ್ಯಕ್ತಿಯೋರ್ವ, ತನ್ನ ಹೆಬ್ಬೆರಳ ಚರ್ಮವನ್ನು ಸುಲಿದು ತನ್ನ ಸ್ನೇಹಿತನಿಗೆ ಅಂಟಿಸಿ ಆತನನ್ನು ಪರೀಕ್ಷೆಗೆ ಕಳಿಸಿದ ಘಟನೆ ಗುಜರಾತ್‌ನಲ್ಲಿ ನಡೆದಿದೆ.

ಆದರೆ, ಬಯೋಮೆಟ್ರಿಕ್ ವಂಚನೆಗೆ ನಡೆಸಲಾದ ಈ ಪ್ರಯತ್ನ ವಿಫಲವಾಗಿದ್ದು, ಅಂಟಿಸಲಾದ ಚರ್ಮ ಕಿತ್ತು ಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಂಚನೆ ಮಾಡಿದ ಅಭ್ಯರ್ಥಿ ಹಾಗೂ ಆತನ ಸ್ನೇಹಿತ ಇಬ್ಬರೂ ಬಿಹಾರದವರು. ಉಭಯರನ್ನೂ ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅವರು ಚರ್ಮವನ್ನು ಇನ್ನೊಬ್ಬರ ಕೈಗೆ ಅಂಟಿಕೊಂಡಿದ್ದರೂ ಸಹ, ಬಯೋಮೆಟ್ರಿಕ್ ಪರೀಕ್ಷೆಯಲ್ಲಿ ವಂಚನೆ ಪತ್ತೆಯಾಗಿರುತ್ತಿತ್ತು ಎಂದು ವೈದ್ಯರು ತಿಳಿಸಿದ್ದಾರೆ. ಬಿಹಾರದ ಮುಂಗೇರ್ ಜಿಲ್ಲೆಯ ಅಭ್ಯರ್ಥಿ ಮನೀಶ್ ಕುಮಾರ್ ಹಾಗೂ ಆತನ ಸ್ನೇಹಿತ ರಾಜ್ಯಗುರು ಗುಪ್ತ ಎಂಬುವವರನ್ನು ಬಂಧಿಸಲಾಗಿದೆ.

ಗುಜರಾತ್‌ನ ಲಕ್ಷ್ಮಿಪುರ ಎಂಬಲ್ಲಿ ಡಿ ದರ್ಜೆಯ ಹುದ್ದೆಗಳಿಗಾಗಿ ಆಗಸ್ಟ್ 22ರಂದು ಪರೀಕ್ಷೆ ನಡೆಸಲಾಗಿತ್ತು.

# ಲಂಬಾಣಿ ಸಂಸ್ಕೃತಿ - ಭಾಷಾ ಅಕಾಡೆಮಿ ಸದಸ್ಯ ಜಾನಪದ ಕಲಾವಿದ ಉಮೇಶ್ ನಾಯ್ಕಗೆ ಸನ್ಮಾನ



ದಾವಣಗೆರೆ,ಆ.25- ಲಂಬಾಣಿ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸದಸ್ಯ ರಾಗಿ ಆಯ್ಕೆಯಾಗಿರುವ ಜಾನಪದ ಕಲಾವಿದ ಉಮೇಶ್ ನಾಯ್ಕ ಅವ ರಿಗೆ 'ಮೈಂಡ್ ಹಂಟರ್ಸ್' ಸಂಸ್ಥೆ ವತಿಯಿಂದ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದಾವಣಗೆರೆ ತಾಲ್ಲೂಕು ಚಿನ್ನಸಮುದ್ರ ಗ್ರಾಮದ ಬಡ ಕುಟುಂಬದಲ್ಲಿ ಬೆಳೆದು, ತಂದೆ- ತಾಯಿಯಿಂದ ಜಾನಪದ ಹಾಡುಗಾರಿಗೆ ಕಲಿತು, ಸುಮಾರು 25 ವರ್ಷಗಳ ಕಲಾ ಸೇವೆಯನ್ನು ನಿರಂತರವಾಗಿ, ಇಂದಿನ ಯುವ ಪೀಳಿಗೆಗೆ ಕಲಿಸುವ ಹಾಗೆಯೇ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತಿರುವುದನ್ನು ಪರಿಗಣಿಸಿ, ಅಕಾಡೆಮಿ ಸದಸ್ಯತ್ವ ಲಭ್ಯವಾಗಿರುವುದು ಹೆಮ್ಮೆಯ ವಿಷಯ.

ಜಾನಪದ ಶೈಲಿ ನಶಿಸುತ್ತಿರುವ ಈ ಕಾಲದಲ್ಲಿ ಯುವ ಜನರಲ್ಲಿ ಅದನ್ನು ಜಾಗೃತಗೊಳಿಸುವ ಕೆಲಸವನ್ನು ಉಮೇಶ್ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಸಂಸ್ಥೆಯ ಅಧ್ಯಕ್ಷರು ಆಶಿಸಿದರು.

ಗ್ರಾಮ ಪಂಚಾಯಿತಿ ಸದಸ್ಯ ಜಿ. ತಿಪ್ಪೇಸ್ವಾಮಿ ಮಾತನಾಡಿ, ಉಮೇಶ್ ಅಕಾಡೆಮಿಗೆ ಆಯ್ಕೆಯಾಗಿರುವುದು ನಮಗೆ ತುಂಬಾ ಸಂತೋಷದ ವಿಷಯ. ಹಾಗೆಯೇ ಗ್ರಾಮದ ಹೆಮ್ಮೆ ಕೂಡ ಆಗಿದೆ ಎಂದರು.

ಈ ಸಂದರ್ಭದಲ್ಲಿ ಉಮೇಶ್ ನಾಯ್ಕ ಮಾತನಾಡಿ, ತಮ್ಮ ಸೇವೆಯನ್ನು ಪರಿಗಣಿಸಿ ಅಕಾಡೆಮಿಗೆ ಆಯ್ಕೆ ಮಾಡಿದ ಪ್ರತಿಯೊಬ್ಬ ಗೌರವಾನ್ವಿತರಿಗೆ ಮತ್ತು ಬೆಂಬಲಕ್ಕೆ ನಿಂತ 'ಮೈಂಡ್ ಹಂಟರ್ಸ್' ಸಂಸ್ಥೆಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆ ಶ್ರೀಮತಿ ಗೀತಾಬಾಯಿ ಶ್ರೀನಿವಾಸ್, ಗ್ರಂಥಾಲಯ ನಿರ್ವಾಹಕಿ ಸಾಕಿಬಾಯಿ ವಾಲ್ಯಾನಾಯ್ಕ, ಆರೋಗ್ಯ ಇಲಾಖೆಯ ಮುರಳೀಧರ, ಪಾಂಡುನಾಯ್ಕ, ಮುಖಂಡರಾದ ಸುರೇಶ್ ನಾಯ್ಕ, ಸೇವ್ಯಾ ನಾಯ್ಕ, ಹೇಮ್ಲಾ ನಾಯ್ಕ ಅವರುಗಳು ಭಾಗವಹಿಸಿದ್ದರು.

# 1ನೇ ವಾರ್ಡ್ ನಿರ್ಲಕ್ಷ್ಯ : ಮೂಲಭೂತ ಸೌಕರ್ಯ ಕಲ್ಪಿಸದಿದ್ದರೆ ಪಾಲಿಕೆಗೆ ಬೀಗ



ದಾವಣಗೆರೆ, ಆ. 24- ಮಹಾನಗರ ಪಾಲಿಕೆ ಮೇಯರ್ ಅವರು 1ನೇ ವಾರ್ಡ್ ನಿರ್ಲಕ್ಷಿಸಿದ್ದಾರೆ. ಇಲ್ಲಿ ಮೂಲ ಸೌಲಭ್ಯಗಳು ಮರೀಚಿಕೆಯಾಗಿವೆ ಎಂದು ಕರ್ನಾಟಕ ರಾಜ್ಯ ಆದಿಜಾಂಬವ ಸಂಘದ ಅಧ್ಯಕ್ಷ ಟಿ.ರಮೇಶ್ ಆರೋಪಿಸಿದ್ದಾರೆ

ಗಾಂಧಿನಗರದ ವಿವಿಧ ಬಡಾವಣೆಗಳಲ್ಲಿ ಅತೀ ಹಿಂದುಳಿದ ವರ್ಗದ ಜನರೇ ವಾಸಿಸುತ್ತಿದ್ದಾರೆ. ಕಾಂಗ್ರೆಸ್ ಸದಸ್ಯರ ವಾರ್ಡ್ ಎಂಬ ಕಾರಣಕ್ಕೆ ನಿರ್ಲಕ್ಷ್ಯ ವಹಿಸಲಾಗಿದೆ. ಗಾಂಧಿನಗರ 2, 3, 5, 6 ನೇ ಕ್ರಾಸ್ ನಲ್ಲಿ ಕನ್ಸರ್ ವೆನ್ಸಿ, ಒಳಚರಂಡಿ, ಸಿಸಿ ಪೇವಿಂಗ್ ಕೆಲಸ ಶೀಘ್ರ ಆರಂಭಿಸಬೇಕು. ರುದ್ರಭೂಮಿ ರಸ್ತೆಯ ಹುಲುಗಾಂಭಿಕ ದೇವಸ್ಥಾನದ ಬಳಿಯ ಪೇಪರ್, ವಾಚನಾಲಯ ದುರಸ್ತಿ ಮಾಡಿಸಬೇಕು.ಇಲ್ಲದಿದ್ದರೆ ಇದೇ 29ರಂದು ಸೋಮವಾರ ಮೇಯರ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ಮಲ್ಲಿಕಾರ್ಜುನ, ನಿಂಗಪ್ಪ, ಬಸವರಾಜ್, ರವಿ, ಪ್ರವೀಣ್, ರೇವಂತ್, ಲಿಂಗರಾಜ್, ಸಂತೋಷ್ ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು 'ಎ.ಆರ್.ಜಿ. ವೈಭವ

ನಗರದ ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಆಶ್ರಯದಲ್ಲಿ ಐ.ಕ್ಯೂ.ಎ.ಸಿ. ಪ್ರೇರಿತ ಎ.ಆರ್.ಜಿ. ವೈಭವ 2K22 ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿಗಳಾದ ಪಿ.ಎನ್. ಲೋಕೇಶ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಪೊಲೀಸ್ ಎಸ್ಪಿ ಸಿ.ಬಿ. ರಿಷ್ಯಂತ್, ದಾವಣಗೆರೆ ವಿವಿಯ ಕುಲಸಚಿವ ಡಾ. ಶಿವಶಂಕರ್ ಕೆ. ಆಗಮಿಸುವರು. ಪ್ರಾಂಶುಪಾಲ ಪ್ರೊ. ಕೆ.ಎಸ್. ಬಸವರಾಜಪ್ಪ ಅಧ್ಯಕ್ಷತೆ ವಹಿಸುವರು. ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ಪ್ರೊ. ಜೆ. ಅನಿತಾಕುಮಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ವೋಟರ್ ಐಡಿ ಆಧಾರ್ ಲಿಂಕ್ ಅಭಿಯಾನ



ದಾವಣಗೆರೆ, ಆ.25 - ವಿನೋಬ ನಗರದಲ್ಲಿ ವೋಟರ್ ಐಡಿ ಆಧಾರ ಲಿಂಕ್ ಅಭಿಯಾನಕ್ಕೆ ಪಾಲಿಕೆ ಸದಸ್ಯ ಎ.ನಾಗರಾಜ್ ಚಾಲನೆ ನೀಡಿದರು. ಪಾಲಿಕೆಯ ಕಂದಾಯ ಅಧಿಕಾರಿ ಸುರೇಶ್ ಪಾಟೀಲ್, ಕಂದಾಯ ಪರಿವೀಕ್ಷಕರಾದ ಸಿ.ದೇವರಾಜ, ಎಚ್.ನಾಗರಾಜ್ ಮತ್ತಿತರರು ಇದ್ದರು

# ನಗರದಲ್ಲಿ ಇಂದು ಪುರಾಣ ಮಂಗಲ

ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಪುರಾಣ ಪ್ರವಚನ ಮಂಗಳ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ ಶಿಷ್ಯರಾದ ಕಾಡಶೆಟ್ಟಿಹಳ್ಳಿಯ ಶಿವಬಸವಯ್ಯ ಶಾಸ್ತ್ರಿಗಳು ಪುರಾಣ ಪ್ರವಚನ ನಡೆಸಿಕೊಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವೀರೇಶ್ವರ ಪುಣ್ಯಾ ಶ್ರಮದ ಅಧ್ಯಕ್ಷ ಅಥಣಿ ವೀರಣ್ಣ, ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ವೀರೇಶ್ವರ ಪುಣ್ಯಾಶ್ರಮದ ನಿರ್ದೇಶಕ ದೇವರಮನಿ ಶಿವಕುಮಾರ್ ಭಾಗವಹಿಸಲಿದ್ದಾರೆ.

ಸಿದ್ದು ರಾಯಭಾಗ್ ಮತ್ತು ಗಿರೀಶ್ ಮುಂಡರಗಿ ಇವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದು, ಭಾಗ್ಯವಂತ ಹಾರ್ಮೋನಿಯಂ, ಯಲಗೂರೇಶ್, ರಾಜು ಮೂಲಗಿ, ಕಿರಣ್ ತಬಲಾ ಸಾಥ್ ನೀಡಲಿದ್ದಾರೆ.

# ಪಠ್ಯದ ಜೊತೆ ಇತರೆ ಪುಸ್ತಕಗಳನ್ನೂ ಓದಿರಿ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ಆರ್. ಅಂಜಿನಪ್ಪ



ದಾವಣಗೆರೆ, ಆ. 25- 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪುಸ್ತಕ ಮಾರಾಟ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಅಭಿಯಾನಕ್ಕೆ ಚಾಲನೆ ನೀಡಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎಸ್.ಆರ್. ಅಂಜಿನಪ್ಪ, ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಪಠ್ಯದ ಜೊತೆ ಇತರೆ ಪುಸ್ತಗಳನ್ನು ಓದುವ ಹವ್ಯಾಸವನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮೊಬೈಲ್ ಬಳಕೆ ಕಡಿಮೆ ಮಾಡಬೇಕು. ಜ್ಞಾನಾರ್ಜನೆಗೆ ಮಾತ್ರ ಮೊಬೈಲ್ ಬಳಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದ ಅವರು, ಸರ್ಕಾರ ಮಕ್ಕಳಲ್ಲಿ ಓದುವ ಹವ್ಯಾಸ ಹೆಚ್ಚಿಸುವ ಉದ್ದೇಶ ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪುಸ್ತಕ ಮಾರಾಟ ಅಭಿಯಾನ ನಡೆಸುತ್ತಿದೆ. ಅದರೊಟ್ಟಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತಿದೆ. ಪ್ರತಿ ವಿದ್ಯಾರ್ಥಿಯೂ ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

'ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ' ಎಂಬ ಬಸವಣ್ಣನವರ ವಚನವನ್ನು ಉದಾಹರಿಸುತ್ತಾ, ಜ್ಞಾನದ ಮಹತ್ವ ತಿಳಿಸಿದ ಪ್ರಾಂಶುಪಾಲರು, ಜ್ಞಾನವನ್ನು ಪಡೆಯದೇ, ಅಜ್ಞಾನದಿಂದ ಹೊರ ಬರಲು ಸಾಧ್ಯವಿಲ್ಲ ಎಂದು ಹೇಳಿದರು.

ಸುಮಾರು 30 ಸಾವಿರ ರೂಪಾಯಿ ಮೌಲ್ಯದ ವಿವಿಧ ಪುಸ್ತಕಗಳನ್ನು ಶೇ.50ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಉದ್ದೇಶ ಹೊಂದಲಾಗಿತ್ತು. ವಿದ್ಯಾರ್ಥಿಗಳು ವಿವಿಧ ಪುಸ್ತಕ ಖರೀದಿಸಿದರು.

ಸಂಜೆ ಕಾಲೇಜು ಪ್ರಾಂಶುಪಾಲ ಸಿ.ಕೆ. ಕೊಟ್ರಪ್ಪ, ವ್ಯವಸ್ಥಾಪಕಿ ಗೀತಾ ದೇವಿ, ಪ್ರಾಧ್ಯಾಪಕರುಗಳಾದ ಡಾ.ಸಿ.ಎಸ್. ಸೋಮಶೇಖರಪ್ಪ, ಮಂಜಣ್ಣ, ಸಂಚಾಲಕ ಮನೋಹರ್, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಲತಾ ಎಸ್.ಎಂ. ಹಾಗು ಇತರರು ಉಪಸ್ಥಿತರಿದ್ದರು. ಗಿರಿಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಜಿಲ್ಲೆಯ ಎಲ್ಲಾ 6 ತಾಲ್ಲೂಕುಗಳಲ್ಲಿ ದಸರಾ ಕ್ರೀಡಾಕೂಟ

ದಾವಣಗೆರೆ ಆ.25- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲೆಯ 6 ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ತಾಲ್ಲೂಕುವಾರು ಏರ್ಪಡಿಸಲಾಗಿದೆ.

ಕ್ರೀಡಾಕೂಟಗಳು ನಡೆಯುವ ಸ್ಥಳ ಮತ್ತು ದಿನಾಂಕ : **ಚನ್ನಗಿರಿ:** ಆ.27 ರಂದು ತಾಲ್ಲೂಕು ಕ್ರೀಡಾಂಗಣ ಚನ್ನಗಿರಿ, **ದಾವಣಗೆರೆ:** ಆ.26 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ, **ಜಗಳೂರು :** ಆ.27 ರಂದು ತಾಲ್ಲೂಕು ಕ್ರೀಡಾಂಗಣ, **ಹರಿಹರ:** ಆ.29 ರಂದು ನಂದಿಗುಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಆಯೋಜಿಸಲಾಗಿದೆ.

ತಾಲ್ಲೂಕು ಮಟ್ಟದ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಹಾಗೂ ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡವನ್ನು ಮಾತ್ರ ಜಿಲ್ಲಾ ಮಟ್ಟದ ಸ್ಪರ್ಧೆಗೆ ಕಳುಹಿಸಿಕೊಡಲಾಗುವುದು. ಭಾಗವಹಿಸುವ ಸ್ಪರ್ಧಾಳುಗಳಿಗೆ ಯಾವುದೇ ವಯಸ್ಸಿನ ನಿರ್ಬಂಧ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

# ಹಬ್ಬದ ಹೆಸರಲ್ಲಿ ಮಾಲಿನ್ಯ ಸಲ್ಲದು

## ನಿಟುವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ




ದಾವಣಗೆರೆ, ಆ. 25 - ಹಬ್ಬದ ಹೆಸರಿನಲ್ಲಿ ಪರಿಸರ ಮಾಲಿನ್ಯ ಮಾಡುವುದು ಸರಿಯಲ್ಲ ಎಂದು ಚಿತ್ರದುರ್ಗದ ಡಾ.ಹೆಚ್.ಕೆ. ಸ್ವಾಮಿ ಹೇಳಿದರು.

ವಾಯು ಮಾಲಿನ್ಯ ನಿಯಂತ್ರಣ ಮಂಡಳಿ, ನಿಸರ್ಗ ಫೌಂಡೇಶನ್ ಹಾಗೂ ನಿಟುವಳ್ಳಿಯ ಸರ್ಕಾರಿ ಪ್ರೌಢಶಾಲೆ ಸಹಯೋಗದಲ್ಲಿ ನಗರದ ನಿಟುವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿಯಲ್ಲಿ ಹಮ್ಮಿಕ್ಕೊಳ್ಳಲಾಗಿದ್ದ ಪರಿಸರ ಸ್ನೇಹಿ ಗಣಪ ಹಬ್ಬ ಆಚರಣೆ ಹಾಗೂ ಪರಿಸರ ಜಾಗೃತಿ ಶಿಬಿರದಲ್ಲಿ ಅವರು ಉಪನ್ಯಾಸ ನೀಡಿದರು.

ಆಡಂಬರ ಮತ್ತು ತಾಂತ್ರಿಕತೆಯ ಮೊರೆ ಹೋಗಿರುವ ಮನುಷ್ಯನಿಂದ ನಿರಂತರವಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಆದರೆ ಇದಾವುದರ ಗೊಡವೆಯೇ ಇಲ್ಲದ ಗ್ರಾಮೀಣ ಜನತೆ ಮಾತ್ರ ಉತ್ತಮ ಪರಿಸರ, ಆರೋಗ್ಯ ಹೊಂದಿರುತ್ತಾರೆ ಎಂದು ಹೇಳಿದರು.

ಗಣೇಶನ ಹಬ್ಬದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಗಳನ್ನು ಹಾಗೂ ರಾಸಾಯನಿಕದಿಂದ ಕೂಡಿದ ಬಣ್ಣದ ಮೂರ್ತಿಗಳನ್ನು ಬಳಸುವುದರಿಂದ ಹೆಚ್ಚಿನ ಪರಿಸರ ಮಾಲಿನ್ಯ ಉಂಟಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪಿಒಪಿ ಹಾಗೂ ರಾಸಾಯನಿಕ ಬಣ್ಣ ಬಳಸದೆ ಅತಿ ಸುಲಭವಾಗಿ ಮಣ್ಣು ಅಥವಾ ಗೋದಿ ಹಿಟ್ಟಿನಿಂದ ಗಣೇಶನನ್ನು ಮಾಡುವ ಪ್ರಾತ್ಯಕ್ಷಿಕೆ ತೋರಿಸಿಕೊಟ್ಟರು. ಇದರೊಟ್ಟಿಗೆ ಚಾಕೋಲೇಟ್ ಕವರ್‌ನಲ್ಲಿ ಹಾರ, ಚರಕದಿಂದ ಬಟ್ಟೆ ತಯಾರಿಕೆ, ಅನೇಕ ನಿರುಪಯುಕ್ತ ವಸ್ತುಗಳಿಂದ ಉಪಯುಕ್ತ ವಸ್ತುಗಳನ್ನು ತಯಾರಿಸುವ ಬಗೆ ವಿವರಿಸಿದರು.

ಮುಖ್ಯ ಅತಿಥಿಯಾಗಿದ್ದ ಶಿಕ್ಷಕ ಕೆ.ಟಿ. ಜಯಪ್ಪ ಅವರು, ನಮ್ಮ ಬಾಹ್ಯ, ಆಂತರಿಕ ಪರಿಸರವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನಮ್ಮ ಸುತ್ತಲಿನ ಪರಿಸರ ಉತ್ತಮವಾಗಿದ್ದರೆ ಮಾನಸಿಕ ಹಾಗೂ ದೈಹಿಕ ಆರೋಗ್ಯವೂ ಉತ್ತಮವಾಗಿರುತ್ತದೆ. ಆದ್ದರಿಂದ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಸುರೇಶ್ ಮಾತನಾಡಿ, ಕೇವಲ ಮನೆಯನ್ನಷ್ಟೇ ಸ್ವಚ್ಛವಾಗಿಟ್ಟುಕೊಳ್ಳುವುದಲ್ಲ. ಶಾಲೆ, ಬೀದಿಗಳನ್ನೂ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ವಸಂತ್ ಹಾಗೂ ಮಂಜುನಾಥ್ ಉಪಸ್ಥಿತರಿದ್ದರು. ಮಮತಾ ದೇಸಾಯಿ ನಿರೂಪಿಸಿದರು. ಕಮಲಮ್ಮ ಸ್ವಾಗತಿಸಿದರು. ರೇಷ್ಮಾ ವಂದಿಸಿದರು.

# ಒಂದು ದೇಶ, ಒಂದೇ ರಸಗೊಬ್ಬರ

## ರಸಗೊಬ್ಬರವನ್ನು 'ಭಾರತ್' ಬ್ರ್ಯಾಂಡ್ ಮಾಡುವ ಕ್ರಮಕ್ಕೆ ಕಾಂಗ್ರೆಸ್ ತರಾಟೆ

ನವದೆಹಲಿ, ಆ. 25 – ಎಲ್ಲಾ ರಸಗೊಬ್ಬರ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಒಂದೇ ಬ್ರಾಂಡ್ ಅಡಿ ಮಾರುವಂತೆ ಕೇಂದ್ರ ಸರ್ಕಾರ ನಿರ್ದೇ ಶನ ನೀಡಿದೆ ಎಂಬ ವರದಿಗಳನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, 'ಒಂದು ದೇಶ, ಒಬ್ಬ ವ್ಯಕ್ತಿ, ಒಂದು ರಸಗೊಬ್ಬರ' ಎಂಬುದು ಸರ್ಕಾರದ ಗುರಿಯಾಗಿರುವಂತಿದೆ ಎಂದು ಹೇಳಿದೆ.

ರಸಗೊಬ್ಬರಗಳ ಬ್ರಾಂಡ್‌ನಲ್ಲಿ ಏಕರೂಪತೆ ತರಲು ಮುಂದಾಗಿರುವ ಕೇಂದ್ರ ಸರ್ಕಾರ, ಎಲ್ಲಾ ಕಂಪನಿಗಳು ತಮ್ಮ ಉತ್ಪನ್ನಗಳನ್ನು 'ಭಾರತ್' ಎಂಬ ಒಂದೇ ಹೆಸರಿನಲ್ಲಿ ಮಾರುವಂತೆ ತಿಳಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಸ್ವಯಂ ಪ್ರಚಾರಕ್ಕಾಗಿ 'ಸರ್ವವ್ಯಾಪಿ' ಏನೇ ಮಾಡಿದರೂ ಅದು ಅಚ್ಚರಿ ತರುವುದಿಲ್ಲ. ಎಲ್ಲಾ ರಸಗೊಬ್ಬರಗಳನ್ನು ಒಂದೇ ಬ್ರಾಂಡ್ ಅಡಿ ಮಾರುವುದು ಇತ್ತೀಚಿನ ನಿರ್ಧಾರವಾಗಿದೆ. ಇದಕ್ಕೂ ಪಿಎಂ - ಬಿಜೆಪಿ (ಭಾರತೀಯ ಜನ ಊರ್ವರಕ್ ಪರಿಯೋಜನ) ಎಂಬ ಹೆಸರಿಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಸರ್ಕಾರದ ಯೋಜನೆ ಅನ್ವಯ, ರಸಗೊಬ್ಬರ ಪಾಕೆಟ್ ಮೇಲಿನ ಮೂರನೇ ಒಂದರಷ್ಟು ಭಾಗವನ್ನು ಮಾತ್ರ ಕಂಪನಿಗಳು ತಮ್ಮ ಹೆಸರು, ಬ್ರಾಂಡ್, ಲೋಗೋ ಹಾಗೂ ಇತರೆ ಮಾಹಿತಿಗೆ ಬಳಸಬೇಕಿದೆ. ಉಳಿದ ಭಾಗದಲ್ಲಿ 'ಭಾರತ್' ಎಂಬ ಒಂದೇ ಬ್ರಾಂಡ್ ಹೆಸರು ಇರಬೇಕಿದೆ. ಅದರ ಕೆಳಗೆ ಪ್ರಧಾನಮಂತ್ರಿ ಭಾರತೀಯ ಜನ ಊರ್ವರಕ್ ಪರಿಯೋಜನ (ಪಿಎಂ - ಬಿಜೆಪಿ) ಎಂಬ ಲೋಗೋ ಇರಬೇಕಿದೆ.

ಸಬ್ಸಿಡಿಯಲ್ಲಿ ಮಾರುವ ರಸಗೊಬ್ಬರಗಳನ್ನು ಒಂದೇ ಬ್ರಾಂಡ್‌ನಡಿ ತರುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ.

ಯೂರಿಯಾ ಸೇರಿದಂತೆ ಹಲವಾರು ರಸಗೊಬ್ಬರಗಳ ಬೆಲೆಯನ್ನು ಸರ್ಕಾರವೇ ನಿಗದಿ ಪಡಿಸುತ್ತಿದೆ. ಈ ಬೆಲೆ ಕಾರಣದಿಂದ ಕಂಪನಿಗಳಿಗೆ ನಷ್ಟವಾದರೆ, ಕೇಂದ್ರ ಸರ್ಕಾರವೇ ಪರಿಹಾರ ನೀಡುತ್ತಿದೆ. ರಸಗೊಬ್ಬರಗಳ ಸಬ್ಸಿಡಿಗಾಗಿ ಕೇಂದ್ರ ಸರ್ಕಾರ 2022-23ರಲ್ಲಿ 2 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಖರ್ಚು ಮಾಡಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರ ನೀಡುತ್ತಿರುವ ಸಬ್ಸಿಡಿ ಕುರಿತು ಜನರಿಗೆ ಸಂದೇಶ ನೀಡುವುದು ಒಂದೇ ಬ್ರಾಂಡ್‌ನ ಉದ್ದೇಶವಾಗಿರುವಂತಿದೆ.

ಸರ್ಕಾರದ ಯೋಜನೆಯಿಂದ ತೊಡಕುಗಳು ಉಂಟಾಗುವ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ. ಬ್ರಾಂಡ್ ಮೌಲ್ಯದ ಬಗ್ಗೆ ಕಂಪನಿಗಳು ಆಸಕ್ತಿ ಕಳೆದುಕೊಳ್ಳಬಹುದು. ಪ್ರಸಕ್ತ ಕಳಪೆ ರಸಗೊಬ್ಬರ ಕಂಡು ಬಂದಲ್ಲಿ ಅದರ ಆರೋಪ ಪ್ರಮುಖವಾಗಿ ಕಂಪನಿ ಮೇಲೆ ಬರುತ್ತದೆ. ಮುಂದಿನ ದಿನಗಳಲ್ಲಿ ಅದು ಸರ್ಕಾರದ ಮೇಲೆ ಬರುವ ಸಾಧ್ಯತೆಯೂ ಇದೆ.

# ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ 108 ಲೀಟರ್ ಕ್ಷೀರಾಭಿಷೇಕ



ದಾವಣಗೆರೆ, ಆ. 25- ನಗರದ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 27ರ ಶನಿವಾರ ವಿಶೇಷ ಪೂಜೆಗಳು ನಡೆಯಲಿವೆ.

ಶ್ರಾವಣದ ಪ್ರಯುಕ್ತ ವಿಶೇಷವಾಗಿ ಪ್ರಧಾನ ದೇವತೆ ಶ್ರೀ ಅನ್ನಪೂರ್ಣೇಶ್ವರಿ ಮಾತೆಗೆ 108 ಲೀಟರ್ ಕ್ಷೀರಾಭಿಷೇಕ ಮತ್ತು ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮತ್ತು ಇತರೆ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ವಿಶೇಷ ಪೂಜೆ, ಅನ್ನ ಸಂತರ್ಪಣೆ

ದಾವಣಗೆರೆ, ಆ. 25 - ನಗರದ ಕೊಟ್ಟೂರು ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 27ರ ಶನಿವಾರ ಬೆಳಿಗ್ಗೆ 6.30 ರಿಂದ 7.30 ರವರೆಗೆ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ.

ನಂತರ ಬೆಳಿಗ್ಗೆ 8ರಿಂದ ಮಧ್ಯಾಹ್ನದವರೆಗೆ ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (94483 56968) ತಿಳಿಸಿದ್ದಾರೆ.

# ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್-2022ರ ಸ್ಪರ್ಧೆಗೆ ಬಿಐಇಟಿ ವಿದ್ಯಾರ್ಥಿಗಳು ಆಯ್ಕೆ



ದಾವಣಗೆರೆ,ಆ.25- ರಾಷ್ಟ್ರೀಯ ಮಟ್ಟದ ಕೋಡಿಂಗ್ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್-2022ರ ಸ್ಪರ್ಧೆಯು ಮಧ್ಯಪ್ರದೇಶದ ಇಂದೋರ್‌ನ ಸೇಜ್ ವಿಶ್ವವಿದ್ಯಾಲಯ ಮತ್ತು ಜಾರ್ಖಂಡ್‌ನ ರಾಂಚಿಯ ಬಿರ್ಲಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದಿನಿಂದ ಎರಡು ದಿನಗಳ ನಿರಂತರ 36 ಗಂಟೆ ಕೋಡಿಂಗ್ ಹ್ಯಾಕಥಾನ್ ನಡೆಯಲಿದೆ.

ಸ್ಪರ್ಧೆಗೆ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮಾಹಿತಿ ತಂತ್ರಜ್ಞಾನ ವಿಭಾಗ, ಗಣಕ ಯಂತ್ರ ವಿಭಾಗ ಮತ್ತು ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಶನ್ ವಿಭಾಗದ ವಿದ್ಯಾರ್ಥಿಗಳನ್ನೊಳಗೊಂಡ ಎರಡು ತಂಡಗಳು ಆಯ್ಕೆಯಾಗಿವೆ.

ಈ ತಂಡಗಳ ಮಾರ್ಗದರ್ಶಕರಾದ ಎಂ.ಟಿ. ವಿನಯ್, ಡಾ|| ಶ್ರೀನಿವಾಸ, ಎನ್. ರಂಜಿತ್ ಅವರು ತಂಡಗಳ ಜೊತೆ ತೆರಳಲಿದ್ದಾರೆ. ತಂಡವನ್ನು ಕಾಲೇಜಿನ ಪ್ರಾಂಶುಪಾಲ ಡಾ|| ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ. ವೈ.ವೃಷಭೇಂದ್ರಪ್ಪ, ಡಾ|| ಪೂರ್ಣಿಮಾ, ಡಾ|| ನಿರ್ಮಲ, ಡಾ|| ಸುನೀತಾ, ಡಾ|| ಪ್ರದೀಪ್, ಪಬ್ಲಿಸಿಟಿ ಡೀನ್ ಡಾ|| ದೇಸಾಯಿ ಹಾಗು ಸಂಸ್ಥೆಯ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

# ಮತದಾರರ ಪಟ್ಟಿಗೆ ಆಧಾರ್ ಜೋಡಣೆ

ದಾವಣಗೆರೆ ಆ.25 - ನಂ-106 ದಾವಣಗೆರೆ ಉತ್ತರ, ನಂ-107 ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಗೆ ಆಧಾರ್ ಜೋಡಣೆ ವಿಶೇಷ ಆಂದೋಲನ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 27 ರಂದು ಮತ್ತು ದಿನಾಂಕ 28 ರಂದು ಹಮ್ಮಿಕೊಳ್ಳಲಾಗಿದೆ.

ಸಂಬಂಧಪಟ್ಟ ಮತಗಟ್ಟೆ ಮಟ್ಟದ ಮೇಲ್ವಿಚಾರಕರು ಹಾಗೂ ಮತಗಟ್ಟೆಗಳ ವ್ಯಾಪ್ತಿಯ ಮನೆಗಳಿಗೆ ಭೇಟಿ ನೀಡಲಿದ್ದು, ಮತದಾರರು ಅಧಿಕಾರಿಗಳಿಗೆ ಮಾಹಿತಿ ನೀಡತಕ್ಕದ್ದು. ಅದಲ್ಲದೇ www.nvsp.in ಅಂತರ್ಜಾಲದ ತಂತ್ರಾಂಶದಲ್ಲಿ ಹಾಗೂ voter help line app ನ ಮೂಲಕ ಆಧಾರ್ ಜೋಡಣೆಯನ್ನು ಮಾಡಬಹುದಾಗಿದೆ ಎಂದು ಮತದಾರರ ನೋಂದಣಾಧಿಕಾರಿಗಳೂ ಆದ ಪಾಲಿಕೆಯ ಉಪ-ಆಯುಕ್ತರು (ಕಂದಾಯ) ತಿಳಿಸಿದ್ದಾರೆ.

# ಸನ್ಮತಿ ಸೌಹಾರ್ದ ಸಹಕಾರಿಗೆ 8.73 ಲಕ್ಷ ಲಾಭ

## ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷ ಟಿ.ಎಂ.ಪಾಲಾಕ್ಷ ಸಂತಸ




ದಾವಣಗೆರೆ, ಆ. 25- ನಗರದ ಪ್ರತಿಷ್ಠಿತ ಕ್ರೆಡಿಟ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಗಳಲ್ಲೊಂದಾದ ಸನ್ಮತಿ ಸೌಹಾರ್ದ ಸಹಕಾರಿಯು ಕೇವಲ ಐದು ವರ್ಷಗಳಲ್ಲಿ ಪ್ರಗತಿಯ ಪಥದಲ್ಲಿ ಮುನ್ನಡೆದಿದೆ ಎಂದು ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಟಿ.ಎಂ. ಪಾಲಾಕ್ಷ ಅವರು ಹರ್ಷ ವ್ಯಕ್ತಪಡಿಸಿದರು.

2022ರ ಮಾರ್ಚ್ 31ರ ಅಂತ್ಯಕ್ಕೆ 23.33 ಲಕ್ಷ ರೂ. ಷೇರು ಬಂಡವಾಳ ಇದ್ದು, ನಿಧಿಗಳು 25.71 ಲಕ್ಷ ರೂ. ನಿಧಿಗಳಾಗಿದೆ. 3 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದ್ದು, 2.56 ಕೋಟಿ ರೂ. ಸಾಲ ಮತ್ತು ಮುಂಗಡಗಳಾಗಿವೆ. 3.54 ಕೋಟಿ ರೂ. ದುಡಿಯುವ ಬಂಡವಾಳವಾಗಿದ್ದು, 8.73 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಅವರು ತಿಳಿಸಿದರು.

ಅವರು ಸ್ಥಳೀಯ ರೋಟರಿ ಬಾಲಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ಸನ್ಮತಿ ಸೌಹಾರ್ದ ಸಹಕಾರಿ ಸಂಘದ 5 ನೇ ಪ್ರಸಕ್ತ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಠೇವಣಿ ಸಂಗ್ರಹಿಸಿ, ಹೆಚ್ಚಿನ ಸಾಲ ಸೌಲಭ್ಯವನ್ನು ಸದಸ್ಯರಿಗೆ ಕಲ್ಪಿಸಲು ಆಡಳಿತ ಮಂಡಳಿ ತೀರ್ಮಾನಿಸಿದೆ. 2022-23ನೇ ಸಾಲಿನಲ್ಲಿ ಉತ್ತಮ ಸೇವಾ ಯೋಜನೆಗಳನ್ನು ಜಾರಿಗೊಳಿಸಿ, ಸದಸ್ಯರು ಮತ್ತು ಗ್ರಾಹಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಪಾಲಾಕ್ಷ ತಿಳಿಸಿದರು.

ಸದಸ್ಯ ಗ್ರಾಹಕರಿಗೆ ಅನುಕೂಲವಾಗಲು ಎಲ್ಲಾ ರೀತಿಯ ಖಾತೆಗಳಿಗೆ ಎಸ್.ಎಂ.ಎಸ್. ಸೌಲಭ್ಯ ಕಲ್ಪಿಸಲಾಗಿದೆ. ಸಹಕಾರಿಯ ಸದಸ್ಯರ ಮರಣೋತ್ತರ ನಿಧಿಯನ್ನು ರೂ. 5000/- ಕ್ಕೆ ಹೆಚ್ಚಿಸಿದ್ದು, ಸದಸ್ಯರಿಗೆ 1,00,000/- ದವರೆಗೆ ಅಪಘಾತ ವಿಮೆ ಮಾಡಿಸಲಾಗಿದ್ದು ಮತ್ತು ಅಪಘಾತದಲ್ಲಿ ಮರಣ ಹೊಂದಿದ್ದ ಸದಸ್ಯರ ವಾರಸುದಾರರಿಗೆ ವಿಮಾ ಕಂಪನಿಯಿಂದ 1 ಲಕ್ಷ ರೂ. ಕೊಡಿಸಲಾಗಿದೆ ಎಂದು ವಿವರಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರು ಮತ್ತು ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಉಪಾಧ್ಯಕ್ಷರೂ ಆದ ಎಂ.ಆರ್. ಪ್ರಭುದೇವ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ನಗರ ಪಾಲಿಕೆ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಅವರು ಕಾರ್ಯಕ್ರಮ ವನ್ನು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು.

ವಾರ್ಷಿಕ ಮಹಾಸಭೆಯ ನಡುವಳಿಕೆಯನ್ನು ಲೆಕ್ಕಾಧಿಕಾರಿ ಎನ್.ಪಿ.ಹರೀಶ್ ಓದಿದರು. ಉಪಾಧ್ಯಕ್ಷ ವಿ.ಹೆಚ್.ಕುಮಾರ್ ಅಧಾವೆ ಪತ್ರವನ್ನು ಸಭೆಗೆ ಮಂಡಿಸಿದರು. ನಿರ್ದೇಶಕ ನ್ಯಾಮತಿ ವಾಸುದೇವ್ ಅವರು ಲಾಭ-ನಷ್ಟದ ತಃಖ್ತೆ ಮತ್ತು ಆಯ-ವ್ಯಯವನ್ನು ಓದಿ ಸದಸ್ಯರಿಂದ ಅನುಮೋದನೆ ಪಡೆದರು.

ಲೆಕ್ಕಪರಿಶೋಧನಾ ವರದಿ ಮತ್ತು ಸಮಗ್ರ ಉಪನಿಯಮಗಳ ತಿದ್ದುಪಡಿಯನ್ನು ಅಧ್ಯಕ್ಷ ಟಿ.ಎಂ. ಪಾಲಾಕ್ಷ ಮಂಡಿಸಿದರು. ಲಾಭ ಹಂಚಿಕೆ ಮತ್ತು 2022-23ನೇ ಸಾಲಿನ ಗುರಿ ಮತ್ತು ಯೋಜನೆಯ ವಿವರವನ್ನು ನಿರ್ದೇಶಕರಾದ ಶ್ರೀಮತಿ ರಾಜೇಶ್ವರಿ ಅವರು ಸಭೆಗೆ ವಿವರಿಸಿದರು.

ನಿರ್ದೇಶಕರುಗಳಾದ ಎನ್.ಹೆಚ್. ಪ್ರಕಾಶಚಾರಿ, ಆರ್.ಇಮ್ರಾನ್ ಖಾನ್, ಪ್ರಸಾದ್ ವಿ. ರಾಯ್ಕರ್, ಡಿ. ರುದ್ರೇಶ್, ಡಿ.ಆರ್. ಸ್ಮಿತಾ, ಕೆ. ಲತಾ, ಕಾರ್ಯದರ್ಶಿ ಮಹಮದ್ ಉಬೇದುಲ್ಲಾ ಮತ್ತು ಸಿಬ್ಬಂದಿ ವರ್ಗದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಕು. ನೇಸರ ಪ್ರಾರ್ಥಿಸಿದರು. ನಿರ್ದೇಶಕ ನರಸಿಂಹ ಮೂರ್ತಿ ಸ್ವಾಗತಿಸಿದರು. ಪಿಗ್ಮಿ ಸಂಗ್ರಾಹಕ ಬಿ. ಬಂಗಾರಪ್ಪ ವಂದಿಸಿದರು.

# ಛತ್ತೀಸಗಢ ಸಮ್ಮೇಳನಕ್ಕೆ ಮೇಯರ್ ಜಯಮ್ಮ



ದಾವಣಗೆರೆ, ಆ.25- ನವದೆಹಲಿಯ ಅಖಿಲ ಭಾರತ ಮೇಯರ್‌ಗಳ ಪರಿಷತ್ ವತಿಯಿಂದ ನಾಡಿದ್ದು ದಿನಾಂಕ 27 ಮತ್ತು 28 ರಂದು ಛತ್ತೀಸ್‌ಗಢದ ರಾಜಧಾನಿ ರಾಯಪುರದಲ್ಲಿ ಹಮ್ಮಿಕ್ಕೊಳ್ಳಲಾಗಿರುವ 50ನೇ ವಾರ್ಷಿಕ ಅಖಿಲ ಭಾರತ ಮೇಯರ್‌ಗಳ ಸಮ್ಮೇಳನದಲ್ಲಿ ಭಾಗವಹಿಸಲು ತೆರಳುತ್ತಿರುವ ಮಹಾಪೌರರಾದ ಶ್ರೀಮತಿ ಆರ್. ಜಯಮ್ಮ ಗೋಪಿನಾಯ್ಕ್ ಅವರಿಗೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ ಶುಭ ಹಾರೈಸಿ, ಬೀಳ್ಕೊಟ್ಟರು.

# ಪಲ್ಲಾಗಟ್ಟೆಯಲ್ಲಿಂದು 'ಡಿಸಿ ನಡೆ ಹಳ್ಳಿ ಕಡೆ'

'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದಡಿ ಇಂದು ಬೆಳಿಗ್ಗೆ 10.30ಕ್ಕೆ ಜಗಳೂರು ತಾಲ್ಲೂಕು ಬಿಳಚೋಡು ಹೋಬಳಿಯ ಪಲ್ಲಾಗಟ್ಟೆ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರು ಪಾಲ್ಗೊಳ್ಳುವರು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte